ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 3
Pages - 20
₹ - 12
March - 2014

... ಹೊಂಗೆಹೂವ ತೊಂಗಲಲ್ಲಿ
ಭೃಂಗದ ಸಂಗೀತಕೇಳಿ
ಮತ್ತೆ ಕೇಳಬರುತಿದೆ.
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.

– ವರಕವಿ ದ.ರಾ. ಬೇಂದ್ರೆ



ಚಾಂದ್ರಮಾನ
ಯುಗಾದಿ



ಕಾಮನಹಬ್ಬ
ಹೋಳಿ ಹುಣ್ಣಿಮೆ



ಅಂತರರಾಷ್ಟ್ರೀಯ
ಮಹಿಳಾ ದಿನ

ಹಾರ್ದಿಕ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 2706 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 570



# 2014–15 ಹಾಗೂ 2015–16 ಆಯವ್ಯಯ ಸಿದ್ಧತೆ : ಹೆಚ್ಚಿದ ಆಡಳಿತ ಮಂಡಳಿಯ ಜವಾಬ್ದಾರಿ

ಅಧ್ಯಕ್ಷರ ಮಾತು

> ಆಯವ್ಯಯ ಎಂದರೆ ಕಳೆದ ವರ್ಷದ ಅಂಕಿ ಸಂಖ್ಯೆಗಳ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಕೂಡುವಿಕೆ ಕಳೆಯುವಿಕೆ ಆಗುವುದಿಲ್ಲ. ಅದು ವೈಜ್ಞಾನಿಕವಾಗಿ ಸಹಕಾರಿಯ ಕ್ರಿಯಾ ಯೋಜನೆಗಳ ಅಭಿವೃದ್ಧಿಯ ಕನ್ನಡಿಯಂತೆ ಇರಬೇಕಾಗುತ್ತದೆ.

ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ ಯುಗಾದಿಯ ಶುಭಹಾರೈಕೆಗಳು. ಪ್ರತಿ ಯುಗಾದಿಯು ಪ್ರತಿಯೊಬ್ಬರ ಜೀವನದಲ್ಲಿ ಹೊಸದನ್ನು ತರಲಿ. ಸುಖ ಶಾಂತಿ ನೆಮ್ಮದಿಯ ಬದುಕು ನೀಡಲಿ. ಉತ್ತರೋತ್ತರ ಅಭಿವೃದ್ಧಿಗಳು ಆಗುತ್ತಿರಲಿ ಎಂದು ಹಾರೈಸುತ್ತೇನೆ. ಬರಲಿರುವ ಜಯನಾಮ ಸಂವತ್ಸರವು ನಿಮಗೆಲ್ಲ ಒಳ್ಳೆಯದನ್ನು ಮಾಡಲಿ ಎಂದು ಆಶಿಸುತ್ತೇನೆ.

ಮಾರ್ಚ್ ತಿಂಗಳು ಪ್ರತಿಯೊಂದು ಸಹಕಾರಿ ಸಂಸ್ಥೆಗೆ ಅತ್ಯಂತ ಮಹತ್ವದ ತಿಂಗಳು. ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸುವ ಮೊದಲು ಬರಬೇಕಾದ ಸಾಲ ಹಾಗೂ ಇತರೆ ವ್ಯವಹಾರಗಳನ್ನು ಕಟ್ಟುನಿಟ್ಟಾಗಿ ಮಾಡಿಕೊಂಡು, ಕೊಡಬೇಕಾದ ಬಾಕಿಗಳನ್ನು ಹಾಗೂ ಇತರೆ ವ್ಯವಹಾರಗಳನ್ನು ಪಾವತಿಸಿ ಲೆಕ್ಕ ಕೈದುಮಾಡಿದ ನಂತರ ಲಾಭಾಂಶವೆಷ್ಟು ಬಂದಿದೆ ಎಂಬುದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಗಳಿಸಿದ ಲಾಭಾಂಶದ ಅವಲೋಕನ ಮಾಡಿದ ಮೇಲೆ 2014–15 ಹಾಗೂ 2015–16ನೇ ಸಾಲುಗಳ ಆಯವ್ಯಯವನ್ನು ಸಿದ್ಧಪಡಿಸುವ ಅಗತ್ಯತೆಯೆ ಈ ವರ್ಷದ ವಿಶೇಷ. ಹಾಗಾಗಿ ಪ್ರತಿಯೊಂದು ಸಹಕಾರಿಯೂ ಈ ಬಗ್ಗೆ ಆಯಾಮ ಮಾಡಬೇಕಾಗುತ್ತದೆ.

ಆಯವ್ಯಯ ಎಂದರೆ ಕಳೆದ ವರ್ಷದ ಅಂಕಿ ಸಂಖ್ಯೆಗಳ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಕೂಡುವಿಕೆ ಕಳೆಯುವಿಕೆ ಆಗುವುದಿಲ್ಲ. ಅದು ವೈಜ್ಞಾನಿಕವಾಗಿ ಸಹಕಾರಿಯ ಕ್ರಿಯಾ ಯೋಜನೆಗಳ ಅಭಿವೃದ್ಧಿಯ ಕನ್ನಡಿಯಂತೆ ಇರಬೇಕಾಗುತ್ತದೆ. 97ನೇ ಸಂವಿಧಾನ ತಿದ್ದುಪಡಿಯ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಾಗಿ ನಿಯಮಗಳು ಜಾರಿಗೆ ಬಂದ ನಂತರ ಸಹಕಾರಿಗಳು ಕಾನೂನು ವ್ಯಾಪ್ತಿಯಲ್ಲಿ ನಿಖರವಾಗಿ ಕಾರ್ಯನಿರ್ವಹಿಸಬೇಕಾದ ಸಂದರ್ಭದಲ್ಲಿ ವಾರ್ಷಿಕ ಮಹಾಸಭೆಗೆ ಹಾಗೂ ಆಡಳಿತ ಮಂಡಳಿಗೆ ಹೆಚ್ಚಿನ ಜವಾಬ್ದಾರಿಗಳಿವೆ. ಈ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಆಡಳಿತ ಮಂಡಳಿಯವರು ಹೆಚ್ಚಿನ ಆಸಕ್ತಿ ವಹಿಸಬೇಕಾಗುತ್ತದೆ.

ವಿಶೇಷವಾಗಿ ಆಯವ್ಯಯ ಸಿದ್ಧತೆಮಾಡುವಾಗ ಸಹಕಾರಿಯ ಹಾಲಿ ಚಟುವಟಿಕೆಗಳನ್ನು ಗಮನಿಸಿ ಹೆಚ್ಚುವರಿ ಕಾರ್ಯಕ್ರಮಗಳ ಬಗ್ಗೆ ಸಹಕಾರಿಯ ವ್ಯಾಪ್ತಿಯಲ್ಲಿ ಅವಕಾಶಗಳು, ಜಾರಿಮಾಡಲಿರುವ ಯೋಜನೆಗಳು, ಹಣಕಾಸಿನ ಮೂಲಗಳು, ಕ್ರೋಢೀಕರಣ ವಿಧಾನಗಳು, ಅಗತ್ಯವಿರುವ ಮಾನವ ಸಂಪನ್ಮೂಲಗಳು, ಯೋಜನೆಗಳ ಅನುಷ್ಠಾನದ ವಿಧಾನ, ಪ್ರತಿಫಲದ ವ್ಯಾಪ್ತಿ ಹಾಗೂ ಸ್ವರೂಪ, ಯೋಜನೆಯ ಅನುಷ್ಠಾನದ ನಂತರದಲ್ಲಿ ಸಹಕಾರಿಯ ಅಭಿವೃದ್ಧಿಯ ಪ್ರಮಾಣದಲ್ಲಿ ಹೆಚ್ಚಳದ ಬಗ್ಗೆ ಸಮಗ್ರ ಚಿಂತನೆಗಳನ್ನು ನಡೆಸಬೇಕಾಗುತ್ತದೆ. ಈ ಬಗ್ಗೆ ಪ್ರತಿಯೊಂದು ಸಹಕಾರಿ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಗಮನಹರಿಸುವುದು ಅಗತ್ಯ.

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಂಪಾದಕೀಯ

## ರಾಜ್ಯ ಆಯವ್ಯಯದಲ್ಲಿ ಸಹಕಾರ



ಶೂನ್ಯ ಬಡ್ಡಿದರದಲ್ಲಿ ರೈತರಿಗೆ ಅಲ್ಪಾವಧಿ ಸಾಲದ ಮಿತಿ ರೂ 2.ಲಕ್ಷ ದಿಂದ 3 ಲಕ್ಷಕ್ಕೆ ಏರಿಕೆ, ನಗರ ಪ್ರದೇಶಗಳಿಗೆ ಯಶಸ್ವಿನಿ ಆರೋಗ್ಯ ವಿಮಾಯೋಜನೆ ಮಹಿಳಾ ಸಹಕಾರ ಸಂಘಗಳ ನೋಂದಣಿಗೆ ಪ್ರೋತ್ಸಾಹ ಹಾಗೂ ವಿಕಲ ಚೇತನರ ಸಹಕಾರಿ ಸಂಘಗಳಿಗೆ ಅನುದಾನ ಇವು ರಾಜ್ಯದ ಹಣಕಾಸು ಇಲಾಖೆಯನ್ನು ಹೊಂದಿರುವ ಮುಖ್ಯಮಂತ್ರಿಗಳು ಮಂಡಿಸಿದ ಆಯವ್ಯಯದಲ್ಲಿ ಸಹಕಾರಿ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿರುವುದಕ್ಕೆ ಸಹಕಾರಿ ಕ್ಷೇತ್ರದ ಪರವಾಗಿ ಅಭಿನಂದನೆಗಳು.

ಫೆಬ್ರವರಿ 14ರಂದು ವಿಧಾನ ಸಭೆಯಲ್ಲಿ ಮಂಡಿಸಿದ ತಮ್ಮ ಆಯವ್ಯಯದಲ್ಲಿ ನಗರ ವ್ಯಾಪ್ತಿಯಲ್ಲಿರುವ ಸಹಕಾರಿ ಸಂಸ್ಥೆಗಳಿಗೂ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯನ್ನು ಜಾರಿಮಾಡುವುದಾಗಿ ಹೇಳಿದ್ದಾರೆ. ನಗರ ವ್ಯಾಪ್ತಿಯ ಸಹಕಾರಿ ಸಂಸ್ಥೆಗಳಿಗೆ ಹಾಗೂ ಲಕ್ಷಾಂತರ ಸದಸ್ಯರುಗಳಿಗೆ ಈ ವಿಷಯ ಸಂತೋಷವನ್ನು ತಂದಿದೆ. ಕಳೆದ 10 ವರ್ಷಗಳಿಂದ ಜಾರಿಯಲ್ಲಿದ್ದ ಯಶಸ್ವಿನಿ ಆರೋಗ್ಯ ಯೋಜನೆ ಕೇವಲ ಗ್ರಾಮಾಂತರ ಪ್ರದೇಶದ ಸಹಕಾರಿ ಸಂಸ್ಥೆಗಳ ಸದಸ್ಯರುಗಳಿಗೆ ಮಾತ್ರ ಲಭ್ಯವಾಗುತ್ತಿತ್ತು. ಈ ಬಗ್ಗೆ ಪಟ್ಟಣ ವ್ಯಾಪ್ತಿಯ ಸಹಕಾರ ಸಂಸ್ಥೆಗಳಿಂದ ಅನೇಕ ದಿನಗಳಿಂದ ಇದ್ದ ಬೇಡಿಕೆಗೆ ಪುರಸ್ಕಾರ ದೊರೆತಂತಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಕಳೆದ ಸಾಲಿನಲ್ಲಿ ಶೂನ್ಯ ಬಡ್ಡಿದರದಲ್ಲಿ ರೂ. 2 ಲಕ್ಷಗಳ ಮಿತಿಯಲ್ಲಿ ಸಾಲ ನೀಡಲಾಗುತ್ತಿತ್ತು. ಪ್ರಸಕ್ತ ಸಾಲಿನಲ್ಲಿ ಈ ಮೊತ್ತವನ್ನು ರೂ. 3 ಲಕ್ಷಕ್ಕೆ ಏರಿಸಿರುವುದು ಸ್ವಾಗತಾರ್ಹ ಹಾಗೂ ಇದರಿಂದ ಗ್ರಾಮೀಣ ಪ್ರದೇಶದ ಹೆಚ್ಚಿನ ರೈತರಿಗೆ ಲಾಭವಾಗುವ ನಿರೀಕ್ಷೆಯಿದೆ.

ಮಹಿಳಾ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ "ಪ್ರಿಯದರ್ಶಿನಿ" ಎಂಬ ಯೋಜನೆಯನ್ನು ಜಾರಿಗೆ ತರುವುದಾಗಿ ತಿಳಿಸಿದ್ದಾರೆ. ಹೆಚ್ಚು ಮಹಿಳೆಯರು ಸಹಕಾರಿ ಕ್ಷೇತ್ರದ ಒಳಗೆ ಬರಬೇಕೆಂಬುದು ಸರಕಾರದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಮುಖ್ಯ ಮಂತ್ರಿಗಳ ವಿಚಾರ ಅಭಿನಂದನೀಯ. ವಿಕಲ ಚೇತನರ ಸಹಕಾರಿ ಸಂಸ್ಥೆಗಳಿಗೆ "ಆಶಾಕಿರಣ" ಯೋಜನೆ ಯಡಿಯಲ್ಲಿ ಅನುದಾನ ಬಿಡುಗಡೆಗೆ ಅವಕಾಶ ಮಾಡಿಕೊಟ್ಟಿರುವುದು ವಿಕಲಚೇತನರು ನಡೆಸುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಹಣಕಾಸಿನ ಪ್ರೋತ್ಸಾಹ ನೀಡಿದಂತಾಗಿದೆ.

ಸಹಕಾರ ಕ್ಷೇತ್ರ ಶ್ರೀ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಗುರಿ ಹೊಂದಿರುವುದರಿಂದ ಸರಕಾರವೂ ಈ ಕ್ಷೇತ್ರದ ಅಭಿವೃದ್ಧಿಗೆ ಗಮನ ಹರಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಹಕಾರ ಕ್ಷೇತ್ರಕ್ಕೆ ಅವಕಾಶಗಳನ್ನು ನೀಡಿದ್ದರೂ ಅವು ಸಾಲದಂತಾಗಿದೆ. ಸಹಕಾರಿ ಕ್ಷೇತ್ರವನ್ನು ಪ್ರೋತ್ಸಾಹಿಸುವ ಇನ್ನೂ ಹೆಚ್ಚು ಅವಕಾಶಗಳು ಆಯವ್ಯಯದಲ್ಲಿ ದೊರೆಯಬೇಕಿತ್ತು ಎಂದು ಸಹಕಾರಿಗಳ ಅಭಿಪ್ರಾಯ.

### ಒಳ ಪುಟಗಳಲ್ಲಿ...


ಶ್ರೀ ವೇಮನ ಸೌಹಾರ್ದ ಸಹಕಾರಿಯ ಶಾಖೆಯ ಉದ್ಘಾಟನೆ ..... 4
ಜನಹಿತ ಸೌಹಾರ್ದ ಸಹಕಾರಿ ನಿ. ಉಡುಪಿ ಇ-ಸ್ಟಾಂಪಿಂಗ್ ಸೇವೆ ಆರಂಭ ........ 5
ಗ್ರಾಮೀಣರ ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಗಳು ಅತಿ ಅವಶ್ಯಕ ........ 6
ಹಾನಗಲ್‌ನ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ.,ಗೆ ಅವಿರೋಧ ಆಯ್ಕೆ ........7
ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆ ........ 8
ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ : ತರಬೇತಿ ಕಾರ್ಯಕ್ರಮ ... 9
ಯುಗಾದಿ ಹಬ್ಬ ಸಹಬಾಳ್ವೆ ಹಾಗೂ ಸಮನ್ವಯತೆಯ ಪ್ರತೀಕ ........ 10
ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ........ 11
ಭಾರತೀಯ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಸವಾಲುಗಳು ........ 12
ಆದಾಯ ತೆರಿಗೆ ಸಮಾಚಾರ ........ 14
ಜಾಮೀನುದಾರರ ಜವಾಬ್ದಾರಿ ಹಾಗೂ ಹೊಣೆಗಾರಿಕೆಗಳು ........ 16
ತೆರಿಗೆ ಮತ್ತು ಕಾನೂನು – ಮಾಹಿತಿ ಮಾಲಿಕೆ ........ 18
ಸಮಗ್ರ ಹಣಕಾಸು ಕ್ಷೇತ್ರದ ಮಾಹಿತಿಗೆ ಒಂದು ವೆಬ್‌ತಾಣ ........ 19
ಕೌಟುಂಬಿಕ ಸಾಮಾಜಿಕ, ಸಾಂಸ್ಕೃತಿಕ ತಳಹದಿಯಿಂದಾಗಿ ಭಾರತೀಯ ಅರ್ಥ ವ್ಯವಸ್ಥೆ ಭದ್ರ ........ 20

# ಶ್ರೀ ವೇಮನ ಸೌಹಾರ್ದ ಸಹಕಾರಿಯ ಶಾಖೆಯ ಉದ್ಘಾಟನೆ

ಸಹಕಾರ ಬ್ಯಾಂಕ್ ಕ್ಷೇತ್ರವನ್ನು ಬೆಳೆಸಲು ಬೆಂಗಳೂರು ಪ್ರಶಸ್ತವಾಗಿದ್ದು, ಸಹಕಾರತತ್ತ್ವದ ಮೂಲಕ ಸಮಾಜಕ್ಕಾಗಿ ಒಗ್ಗೂಡಿ ಕೆಲಸ ಮಾಡುವ ಅಗತ್ಯವಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಎಚ್.ಕೆ. ಪಾಟೀಲ್ ಅಭಿಪ್ರಾಯಪಟ್ಟರು.

ಶ್ರೀವೇಮನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್‌ನ ನೂತನ ಶಾಖೆಯನ್ನು ಎಚ್‌ಎಸ್‌ಆರ್ ಬಡಾವಣೆಯಲ್ಲಿ ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, 10 ವರ್ಷಗಳ ಹಿಂದೆ ವೇಮನನ ಹೆಸರಲ್ಲಿ ಆರಂಭಗೊಂಡ ಬ್ಯಾಂಕು ಶಾಖೆಗಳನ್ನು ತೆರೆಯುವಷ್ಟು ಆರ್ಥಿಕವಾಗಿ ಶಕ್ತಿಯುತವಾಗಿದೆ. ಆದರೆ ಇಷ್ಟೇ ಸಾಲದು. ಬೆಂಗಳೂರಿನಲ್ಲಿ ಬೆಳೆಯಲು ಸಾಕಷ್ಟು ಅನುಕೂಲಗಳಿವೆ. ಇಡೀ ಸಮುದಾಯ ಒಟ್ಟಾಗಿ ಸಮಾಜದ ಏಳಿಗೆಗೆ ದುಡಿಯಬೇಕಾಗಿದೆ ಎಂದರು.

ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ.ವಿ.ರೆಡ್ಡಿ ಮಾತನಾಡಿ, ಜವಾಬ್ದಾರಿಯುತ ಸದಸ್ಯರು ಸ್ವಯಂ ಆಡಳಿತ ನಿರ್ವಹಣೆ, ಸ್ವಾಯತ್ತತೆ, ಸ್ವಯಂ ನಿಯಂತ್ರಣ ಇಂತಹ ಸೌಹಾರ್ದ ಸಹಕಾರಿ ತತ್ವಗಳಲ್ಲಿ ನಂಬಿಕೆ ಇಟ್ಟು ಸಂಸ್ಥೆ ಸ್ಥಾಪಿಸಲಾಯಿತು. ಠೇವಣಿಗಳಿಗೆ ಆಕರ್ಷಕ ಬಡ್ಡಿ ಭದ್ರತಾ ಕಪಾಟು, ಮನೆಕಟ್ಟಲು ಸಾಲ, ಕಟ್ಟಡ ಅಡಮಾನ ಸಾಲ, ಸಂಬಳಾಧಾರಿತ ಸಾಲ, ವಾಹನ ಸಾಲ, ಚಿನ್ನ ಮತ್ತು ವೃತ್ತಿಪರರಿಗೆ ಸಾಲ ಮುಂತಾದ



ಸೌಲತ್ತುಗಳನ್ನು ಸದಸ್ಯರ ಅನುಕೂಲಕ್ಕೆ ತಕ್ಕಂತೆ ನೀಡಲಾಗುತ್ತದೆ ಎಂದರು. ಸಾರಿಗೆ ಸಚಿವ ಶ್ರೀ ರಾಮಲಿಂಗರೆಡ್ಡಿಯವರು ಸಿಬಿಎಸ್‌ಇ ಶಾಖೆಯ ಉದ್ಘಾಟನೆಯನ್ನು ನೆರವೇರಿಸಿ ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ಕ್ಯಾಸ್ಕಾರ್ಡ್ ಬ್ಯಾಂಕ್ ಅಧ್ಯಕ್ಷ ಶ್ರೀ ಶಿವರಾಮರವರು ಅನೇಕ ಸಹಕಾರಿ ಧುರೀಣರು ಉಪಸ್ಥಿತರಿದ್ದರು.

# ಮಹಾಯೋಗಿ ವೇಮನ ಜಯಂತಿಯಂದು ರಕ್ತದಾನ ಶಿಬಿರ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ದಿನಾಂಕ : 19-01-2014ರಂದು ವೇಮನ ಜಯಂತಿಯ ಪ್ರಯುಕ್ತ ರೆಡ್ಡಿ ಜನ ಸಂಘ, ಬೆಂಗಳೂರು ಉತ್ತರ ವಲಯ ಮತ್ತು ರೆಡ್ ಕ್ರಾಸ್ ಇವರ ಸಹಯೋಗದೊಂದಿಗೆ "ರಕ್ತದಾನ ಶಿಬಿರ"ವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ವಿಧಾನಸಭೆಯ ಉಪಸಭಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ, ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಮುನಿರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಎನ್.ವೇಮಾರೆಡ್ಡಿ, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀಯುತ ಎ.ಆರ್.ಶಿವರಾಮ್‌ರೆಡ್ಡಿ, ಜಯಸೂರ್ಯ ಡೆವಲಪರ್ಸ್‌ನ ಪಾಲುದಾರರಾದ ಶ್ರೀಯುತ ಹೆಚ್.ಗೋಪಿ, ಶ್ರೀಯುತ ಭಾರ್ಗವ್, ಅಟ್ಟೂರು ವಾರ್ಡ್‌ನ ಬಿಬಿಎಂಪಿ ಸದಸ್ಯರಾದ ಶ್ರೀಮತಿ ಡಾ.ಗೀತಾ ಶಶಿಕುಮಾರ್, ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ ಹಾಗೂ ಆರ್.ಎಸ್.ಎಸ್.ಎನ್.ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀಮತಿ ವಾಣಿಶ್ರೀ ವಿಶ್ವನಾಥ್‌ರವರು ದೀಪ ಬೆಳಗಿಸಿ ರಕ್ತದಾನ ಶಿಬಿರವನ್ನು ಉದ್ಘಾಟಿಸಿದರು. ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಜರಿದ್ದರು.

## ಶಿವಜ್ಯೋತಿ ಸೌಹಾರ್ದ ಪತ್ತಿನ ಸಹಕಾರಿ ತುಮಕೂರು ನೂತನ ಸಹಕಾರಿಯ ಪ್ರಾರಂಭೋತ್ಸವ ಸಮಾರಂಭ



ತುಮಕೂರು ನಗರದಲ್ಲಿ ನೂತನವಾಗಿ ಅಸ್ಥಿತ್ವಕ್ಕೆ ಬಂದಿರುವ ಶಿವಜ್ಯೋತಿ ಸೌಹಾರ್ದ ಪತ್ತಿನ ಪ್ರಾರಂಭೋತ್ಸವ ಸಮಾರಂಭದಲ್ಲಿ ಸಿದ್ದರಬೆಟ್ಟ ಸುಕ್ಷೇತ್ರದ ಮಠಾಧ್ಯಕ್ಷರಾದ ಶ್ರೀ ವೀರಭದ್ರಶಿವಾಚಾರ್ಯ ಸ್ವಾಮೀಜಿಯವರು ಉದ್ಘಾಟಿಸಿ, ಸಮಾಜದಲ್ಲಿ ಸಂತೃಪ್ತಿ ಮತ್ತು ಸಮೃದ್ಧಿ ಸಹಕಾರ ಕ್ಷೇತ್ರದಿಂದಲೇ ಮಾತ್ರ ಸಾಧ್ಯ ಎಂದು ತಿಳಿಸಿದರು.

## ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ



ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ಲಿಂಗಾಪುರ ನೂತನ ಶಾಖೆಯನ್ನು ಶ್ರೀ ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾದ ಶತಾಯುಷಿ ಡಾ.ಶಿವಕುಮಾರ ಮಹಾಸ್ವಾಮಿಗಳು ಉದ್ಘಾಟಿಸಿದರು.

## ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಿಂಧನೂರು



ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಿಂಧನೂರು ಶಹಾಪುರ ಶಾಖೆ ಉದ್ಘಾಟನೆ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್, ಪಂಪನಗೌಡ ಬಾದರ್ಲಿ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು ವಿಭಾಗ

## ಜನಹಿತ ಸೌಹಾರ್ದ ಸಹಕಾರಿ ನಿ. ಉಡುಪಿ ಇ-ಸ್ಟಾಂಪಿಂಗ್ ಸೇವೆ ಆರಂಭ



ಜನಹಿತ ಸೌಹಾರ್ದ ಸಹಕಾರಿ ನಿ., ಮಣಿಪಾಲ ಶಾಖೆಯಲ್ಲಿ ಇ-ಸ್ಟ್ಯಾಂಪಿಂಗ್ ಸೇವೆಯನ್ನು ಉಡುಪಿ ಶಾಸಕ ಶ್ರೀ ಪ್ರಮೋದ್ ಮಧ್ವರಾಜ್ ಉದ್ಘಾಟಿಸಿ ಶುಭ ಕೋರಿದರು.

ಉಡುಪಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಉಪೇಂದ್ರ ನಾಯಕ್, ನಗರಸಭಾ ಸದಸ್ಯ ನರಸಿಂಹ ನಾಯಕ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಭಾಸ್ಕರ ಕಾಮತ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಹಕಾರಿಯ ಅಧ್ಯಕ್ಷ ಗೋಪಾಲ್ ಯು, ಉಪಾಧ್ಯಕ್ಷರಾದ ಗೋಪಾಲ್ ಸಿ. ಮೂಲ್ಯ, ಸ್ಥಾಪಕಾಧ್ಯಕ್ಷ ಮತ್ತು ನಿರ್ದೇಶಕರಾದ ವೈ ಎಸ್ ಮಡಿವಾಳ್, ನಿರ್ದೇಶಕರುಗಳಾದ ಸದಾನಂದ ಪ್ರಭು, ವಿಜಯ ಶೆಟ್ಟಿ, ವಸಂತ ನಾಯ್ಕ್, ಮಂಜುನಾಥ ನಾಯ್ಕ್, ಕೃಷ್ಣ ಎಮ್ ಸಾಲ್ಯಾನ್ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ವಿಜಯ ಉಪಸ್ಥಿತರಿದ್ದರು.



## ಸೌಹಾರ್ದ ಸಹಕಾರಿ ಅಧ್ಯಕ್ಷರ ಮಾರ್ಚ್ ಮಾಹೆಯ ಪ್ರವಾಸ ಕಾರ್ಯಕ್ರಮ

| | |
|---|---|
| 1, 2 ಮಾರ್ಚ್ 2014 | ಬೀದರ |
| 3, 4 | ಬೆಂಗಳೂರು |
| 5 | ಮೈಸೂರು |
| 6, 7, | ಬೀದರ |
| 8, 9, 10, 11, 12 | ಬೆಂಗಳೂರು |
| 13, 14, 15, 16 | ಬೀದರ |
| 17, 18, 19 | ಗುಲ್ಬರ್ಗಾ |
| 20, 21, 22 | ಬೆಳಗಾವಿ |
| 23, 24, 25, 26 | ಬೀದರ |
| 27, 28, 29 | ಬೆಂಗಳೂರು |
| 30, 31 | ಬೀದರ |

# ಗ್ರಾಮೀಣ ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಗಾಗಿ ಸಹಕಾರಿ ಸಂಸ್ಥೆಗಳು-ಜ್ಯಾಂತಿಕರ

ಭಾರತದ ಜೀವನಾಡಿಯಾದ ಗ್ರಾಮಗಳ ಸುಧಾರಣೆಯಾಗಬೇಕಾದರೆ ಜನಸಾಮಾನ್ಯರು ಆರ್ಥಿಕವಾಗಿ ಸದೃಢ ಹೊಂದಬೇಕು, ಅಂತಹ ಸದೃಢತೆಗೆ ಸಹಕಾರಿಗಳು ಅತಿ ಅವಶ್ಯಕವೆಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಅಭಿಪ್ರಾಯ ಪಟ್ಟರು.

ದಿನಾಂಕ : 12-02-2014ರಂದು ಚಿಕ್ಕೋಡಿ ತಾಲೂಕಿನ ಶಮನೇವಾಡಿಯ ಶ್ರೀ ಪಾರ್ಶ್ವನಾಥ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಬೆಳಗಾವಿ ಜಿಲ್ಲೆಯಲ್ಲಿ ಇಂದು ಸೌಹಾರ್ದ ಸಹಕಾರಿಗಳ ಜೀವನಾಡಿಯಾಗಿ ಕಾರ್ಯನಿರ್ವಹಿಸುತ್ತಿವೆ, ಒಬ್ಬ ಜನಸಾಮಾನ್ಯನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆಗೆಯಬೇಕಾದರೆ 4-5 ಸಲ ಒಡಾಡಬೇಕಾಗುತ್ತದೆ ಸಾಲವನ್ನು ಪಡೆಯುವುದು ದೂರದ ಮಾತು. ಆದರೆ ಸೌಹಾರ್ದ ಸಹಕಾರಿಗಳು ಸದಸ್ಯನ ಸಾಮರ್ಥ್ಯ, ಹಾಗೂ ವ್ಯಕ್ತಿತ್ವದ ಆಧಾರದ ಮೇಲೆ ಅವನ ಕಷ್ಟಕಾಲದಲ್ಲಿ ಸಹಕಾರಿಯಾಗಿವೆ, ಇದರಿಂದಾಗಿ ಸದಸ್ಯನ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆಯಿಂದ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತಿದೆ, ಇಂತಹ ಗ್ರಾಮೀಣ ಪ್ರದೇಶದಲ್ಲಿ ಸುಸಜ್ಜಿತವಾದ ಸ್ವಂತಕಟ್ಟಡ ನಿರ್ಮಾಣವಾಗಿದರಿಂದ ಸದಸ್ಯರಿಗೆ



ಮತ್ತಷ್ಟು ಅವರಲ್ಲಿ ಭರವಸೆ ಮೂಡಿದೆ ಇದಕ್ಕೆಲ್ಲ ದುಡಿದಿರುವ ಎಲ್ಲಾ ಆಡಳಿತ ಮಂಡಳಿಯವರಿಗೂ ಹಾಗೂ ಸಿಬ್ಬಂದಿಗಳಿಗೆ ಸಂಯುಕ್ತ ಸಹಕಾರಿ ಪರವಾಗಿ ಹಾರ್ದಿಕ ಅಭಿನಂದನೆಗಳು ಸಲ್ಲಿಸಿದರು.

ಸಹಕಾರಿಯ ನೂತನ ಕಟ್ಟಡವನ್ನು ಉದ್ಘಾಟಿಸಿರುವ ಹಿರಿಯ ಸಹಕಾರಿಗಳು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಕವಟಗಿಮಠ ಮಾತನಾಡುತ್ತ ಒಂದು ಸಹಕಾರಿ ಹುಟ್ಟಿಹಾಕಿ ಅದನ್ನು ಉತ್ತಮವಾಗಿ ಬೆಳೆಸುವುದು ತುಂಬ ಕಷ್ಟದ್ದು, ಆದರೂ ಸಹ ಇಂತಹ ಗ್ರಾಮೀಣ ಪ್ರದೇಶದಲ್ಲಿ ಇಂತಹ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿರುವುದು ಹೆಮ್ಮೆ ಪಡುವಂತಹುದು. ಸೌಹಾರ್ದ ಸಹಕಾರಿಯ ಚಳುವಳಿಯ ಬೆಳವಣಿಗೆಗೆ ಯಾವಾಗಲೂ, ನಿಮ್ಮ ಜೊತೆಗಿರುತ್ತೇನೆ ಎಂದರು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾವಸಾಹೇಬ ಪಾಟೀಲ, ಶ್ರೀ ದಯಾನಂದ ಬಿ. ಜಾಧವ್, ಕರ್ನಾಟಕ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಅಶೋಕ್ ಪಾಟೀಲ್, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಮತಿ ಸುಜಾತ ಆರ್.ಖೋತ, ಕರ್ನಾಟಕ ರಾಜ್ಯ ಕ್ರೆಡಿಟ್ ಅಸೋಶಿಯೇಷನ್ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರದೀಪ್ ದಾಬಶೆಟ್ಟಿ ಹಾಗೂ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಮಹಾಜನ ಸಹಕಾರಿಯ ಸಂಸ್ಥಾಪಕರಾದ ಶ್ರೀ ವಿಜಯಕುಮಾರ್, ಸಂಯುಕ್ತ ಸಹಕಾರಿಯ ಅಧಿಕಾರಿ ಸೂರ್ಯಕಾಂತ್ ರ್‍ಯಾಕಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ದಿನಾಂಕ : 18/1/2014ರಂದು ಶಿರ್ಸಿಯಲ್ಲಿ ಯು.ಕೆ.ಸೌಹಾರ್ದ ಸಹಕಾರಿ ಯಲ್ಲಾಪುರ ಇದರ ಶಾಖಾ ಉದ್ಘಾಟನೆಯನ್ನು ಮಾನ್ಯ ಪ್ರವಾಸೋದ್ಯಮ ಸಚಿವ ಶ್ರೀ ಆರ್.ವಿ.ದೇಶಪಾಂಡೆ ನೇರವೇರಿಸಿದ ಸಂದರ್ಭದಲ್ಲಿ ಮಾಜಿ ಸಚಿವ ಹಾಗೂ ಶಾಸಕ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಶಾಂತಾರಾಮ ಹೆಗಡೆ, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಮತ್ತು ಯು.ಕೆ. ಸೌಹಾರ್ದ ಸಹಕಾರಿಯ ನಿರ್ದೇಶಕರು ಮತ್ತು ಇತರರು ಚಿತ್ರದಲ್ಲಿದ್ದಾರೆ.

## ತಿದ್ದುಪಡಿ :



ಶ್ರೀ ಎಸ್.ಪಿ.ಕಾಮತ್

ಕಳೆದ ಸಂಚಿಕೆಯ 8ನೇ ಪುಟದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಎಸ್.ಪಿ.ಕಾಮತರವರ ಹೆಸರು ತಪ್ಪಾಗಿ ಎಸ್.ಪಿ. ನಾಯಕ ಎಂದು ಮುದ್ರಿಸಲಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.

## ಸಿಂಧನೂರಿನ ರಾಣಿ ಚನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ.,ಗೆ ಅವಿರೋಧ ಆಯ್ಕೆ



ಶ್ರೀ ಡಿ.ರಾಮದಾಸ್,
ಅಧ್ಯಕ್ಷರು



ಶ್ರೀ ಜಿ. ಬಸವರಾಜ,
ಗೋನವಾರ ಉಪಾಧ್ಯಕ್ಷರು

## ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ.



ಶ್ರೀ ನಿಜಗುಣಪ್ಪ
ಅಧ್ಯಕ್ಷರು



ಶ್ರೀ ಅನಿಲಕುಮಾರ
ಉಪಾಧ್ಯಕ್ಷರು

## ಹಾನಗಲ್‌ನ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ.,ಗೆ ಅವಿರೋಧ ಆಯ್ಕೆ

ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾನಗಲ್ಲ. 2013–2014 ರಿಂದ 2018–2019 ವರೆಗಿನ 5 ವರ್ಷ ಅವಧಿಗೆ ನೂತನ ಅಧ್ಯಕ್ಷರಾಗಿ ಶ್ರೀ ಎಂ.ಬಿ.ಕಲಾಲ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಆರ್.ಎನ್.ಮಾಸನಕಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿ ಸದಸ್ಯರಾಗಿ ಬಸವರಾಜ ಎಸ್.ಅಕ್ಕಿವಳಿ ಪಿ.ವಾಯ್. ಗುಡಗುಡಿ ಪಿ.ಎಚ್. ಶಿಂದೆ, ತುಳಜಪ್ಪ ಲಮಾಣಿ ಸಿ.ಎಂ.ಉದಾಸಿ, ವಿ.ವಾಯ್ ಅಚಲಕರ, ಡಿ.ಎಂ.ಮೂಡ್ಲಿ, ಇಂದುಮತಿ ಜೋಶಿ, ರೇಣುಕಾ ತಮ್ಮಣ್ಣ ಬಂಕಾಪುರ ಆಯ್ಕೆಯಾಗಿದ್ದಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿ.ಎಂ.ಉದಾಸಿ, ಮಾಜಿ ಲೋಕೋಪಯೋಗಿ ಸಚಿವರು ಸಂಸ್ಥೆಯ ನೂತನ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಹಾಗೂ ನಿರ್ದೇಶಕ ಮಂಡಳಿ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದರು.



ಶ್ರೀ ಎಂ.ಬಿ. ಕಲಾಲ
ಅಧ್ಯಕ್ಷರು



ಶ್ರೀ ಆರ್.ಎಸ್.ಮಾಸನಕಟ್ಟಿ
ಉಪಾಧ್ಯಕ್ಷರು

## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ.,ಗೆ ಅವಿರೋಧ ಆಯ್ಕೆ



ಶ್ರೀ ವೈ.ಎಸ್.ಸುಬ್ರಹ್ಮಣ್ಯ
ಅಧ್ಯಕ್ಷರು




ಶ್ರೀ ಎಲ್.ಡಿ. ನವೀನ್
ಉಪಾಧ್ಯಕ್ಷರು

ಶ್ರೀ ವೈ.ಎಸ್. ಸುಬ್ರಹ್ಮಣ್ಯ, ಶ್ರೀ ಎಲ್.ಡಿ. ನವೀನ್, ಶ್ರೀ ಜಿ.ಎಸ್. ಮಹಾಬಲ, ಶ್ರೀ ಆರ್. ದೇವಾನಂದ, ಶ್ರೀ ಹೆಚ್.ಕೆ. ಭಾಸ್ಕರ್‌ರಾವ್, ಶ್ರೀ ಹೆಚ್.ಎ. ಕೃಷ್ಣಮೂರ್ತಿ, ಶ್ರೀ ಜಿ.ಎಸ್. ನಟರಾಜ್, ಶ್ರೀ ಜಿ.ಎಸ್. ಪ್ರಸನ್ನ ಹೆಬ್ಬಾರ್, ಶ್ರೀ ಕೆ.ಪಿ. ಕೃಷ್ಣಾನಂದ, ಶ್ರೀ ಅಣ್ಣಪ್ಪ, ಶ್ರೀ ರಾಮಣ್ಣ ಭಂಡಾರಿ, ಶ್ರೀ ವೈ.ಎಸ್. ಕೃಷ್ಣಮೂರ್ತಿ, ಶ್ರೀ ಬಿ.ಪಿ. ಸದಾನಂದ, ಶ್ರೀ ಎಸ್.ಎಸ್. ಶೇಷಗಿರಿ, ಶ್ರೀ ಕೆ.ಎಸ್. ಸುಬ್ರಹ್ಮಣ್ಯ, ಶ್ರೀಮತಿ ಗೀತಾಸುದರ್ಶನ್ ಮತ್ತು ಶ್ರೀಮತಿ ಗಾಯಿತ್ರಿ ಶ್ರೀ ಗಣೇಶ್ ಇವರು ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಸಹಕಾರಿಯ 2014–15 ರಿಂದ 2018–19 ಸಾಲಿನವರೆಗೆ ನಿರ್ದೇಶಕರಾಗಿ ಅವಿರೋಧ ಆಯ್ಕೆಯಾಗಿದ್ದಾರೆಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಿಳಿಸಿದ್ದಾರೆ.

## ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,ಗೆ ಅವಿರೋಧ ಆಯ್ಕೆ



ಎಸ್.ಎನ್.ವಿಶ್ವನಾಥ್
ಅಧ್ಯಕ್ಷರು



ಮಂಗಳಾ ಪ್ರವೀಣ್
ಉಪಾಧ್ಯಕ್ಷರು

## ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು



ಶ್ರೀ ಟಿ.ಎಲ್. ಸುರೇಶ್ ರಾವ್, ಅಧ್ಯಕ್ಷರು



ಶ್ರೀ ಟಿ.ಆರ್. ಮದನ್ ಮೋಹನ್‌ರಾವ್, ಉಪಾಧ್ಯಕ್ಷರು

## ಶಿಕ್ಷಣ ನಿಧಿ ಸಲಹಾ ಸಮಿತಿಯ ಶ್ರೀ ಬಿ.ಎಸ್. ಸುಲ್ತಾನಪೂರಿಯವರಿಗೆ ಅಭಿನಂದನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಗೆ ಶ್ರೀ ಬಿ.ಎಸ್. ಸುಲ್ತಾನಪುರಿ ನಾಮನಿರ್ದೇಶನಗೊಂಡು, ವಿಭಾಗಿಯ ಕಛೇರಿಗೆ ಭೇಟಿ ನೀಡಿದಾಗ ಕಛೇರಿಯ ರಿಜನಲ್ ಮ್ಯಾನೇಜರ್ ಶ್ರೀ ಜಿ.ಎಸ್. ಟೋಪಣ್ಣನವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಸ್ವಾಗತವನ್ನು ಸ್ವೀಕರಿಸಿ ಮಾತನಾಡುತ್ತ, ಸಂಯುಕ್ತ ಸಹಕಾರಿಯು ಶೀಕ್ಷಣ ನಿಧಿ ಸಲಹಾ ಸಮಿತಿಯ ನಾಮನಿರ್ದೇಶಕರಾಗಿ ನೇಮಕಮಾಡಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಅಭಿನಂದನೆಗಳು ನನ್ನ ಎರಡು ವರ್ಷದ ಅವಧಿಯಲ್ಲಿ ರಾಜ್ಯದ ಸಹಕಾರಿಗಳಿಗೆ ಹಾಗೂ ಬೆಳಗಾವಿ ವಿಭಾಗದಲ್ಲಿ ಹೆಚ್ಚಿನ ಹಾಗೂ ಅವಶ್ಯಕ ತರಬೇತಿಯನ್ನು ಆಯೋಜಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ. ಇದಕ್ಕೆ ಎಲ್ಲಾ ಸಿಬ್ಬಂದ್ದಿಗಳ ಸಹಕಾರ ಬೇಕು ಎಂದು ಕೋರಿದರು.



ಗುಲ್ಬರ್ಗಾ ವಿಭಾಗ

## ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆ



ದಿನಾಂಕ : 13.02.2014 ರಂದು ಗುಲಬರ್ಗಾದಲ್ಲಿ ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ ಹಾಗೂ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಸಂಜೀವ ಮಹಾಜನ ಮತ್ತು ಸಹಕಾರಿ ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗುಲಬರ್ಗಾ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸೋಮಶೇಖರ ಗೋನಾಯಕ ಹಾಜರಿದ್ದರು. ಅಧ್ಯಕ್ಷತೆಯನ್ನು ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿ"ಯ ಅಧ್ಯಕರಾದ ಶ್ರೀ ಚಂದ್ರಶೇಕರ ಎಸ್. ಪರಸರೆಡ್ಡಿ ವಹಿಸಿದ್ದರು.

## ಕಮಲಾಪೂರ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆ

**ದಿನಾಂಕ :** 15.02.2014 ರಂದು ಸಂಜೆ ಗುಲಬರ್ಗಾ ನಗರದಲ್ಲಿ "ಕಮಲಾಪೂರ ಸೌಹಾರ್ದ ಪತ್ತಿನ ಸಹಕಾರಿ"ಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲ ಹಾಗು ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಮತ್ತು ಸಹಕಾರಿ ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗುಲಬರ್ಗಾ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸೋಮಶೇಖರ ಗೋನಾಯಕ, ಡಿ.ಸಿ.ಸಿ ಬ್ಯಾಂಕಿನ ಸಿ.ಇ.ಓ ಶ್ರೀ ಶರಣಬಸಪ್ಪ ಬೆಣ್ಣೂರ ಹಾಜರಿದ್ದರು. ಅಧ್ಯಕ್ಷತೆಯನ್ನು ಕಮಲಾಪೂರದ ಮಾಜಿ ಶಾಸಕರಾದ ಶ್ರೀ ಸುಭಾಶ ಪಾಟೀಲ ಇವರು ವಹಿಸಿದ್ದರು. ಕಾರ್ಯಕ್ರಮವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಸುರೇಶ ಶೀಲವಂತ ಇವರು ನಿರೂಪಿಸಿದರು. ಶ್ರೀ ಶಿವಾನಂದ ರಾಂಪುರೆ ಅವರು ವಂದನಾರ್ಪಣೆಯನ್ನು ನೇರವೇರಿಸಿದರು.

## ಅಧ್ಯಕ್ಷರು, ನಿರ್ದೇಶಕರ ಭೇಟಿ



ದಿನಾಂಕ : 15.02.2014ರಂದು ಯಾದಗಿರಿಯ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥಜ್ಯಾಂತಿಕರ ಇವರುಗಳು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ.ಶರಣರೆಡ್ಡಿ ಕೋಡ್ಲಾ ಹಾಗೂ ಆಡಳಿತ ಮಂಡಳಿಯ ಸದಸ್ಯರು ಹಾಜರಿದ್ದರು.

## ಶ್ರೀ ಸಾಯಿಬಾಬಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ : ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಶ್ರೀ ಸಾಯಿಬಾಬಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆಯನ್ನು ಶ್ರೀ ಶ॥ ಬ್ರ॥ ಸಿದ್ಧರಾಮೇಶ್ವರ ಶಿವಾಚಾರ್ಯರು ಶಿಖರ ಮಠ ದೇವದುರ್ಗ ಇವರು ನೆರವೇರಿಸಿದರು. ಸಹಕಾರಿಯ ಅಧ್ಯಕ್ಷರಾದ ಶರಣಗೌಡ ಕಮತಗಿ ಹಾಗೂ ಉಪಾಧ್ಯಕ್ಷರು ಮತ್ತು ಎಲ್ಲಾ ಸಹಕಾರಿಯ ನಿರ್ದೇಶಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಸಂಯುಕ್ತ ಸಹಕಾರಿಯ ಮಾರ್ಚ್ 2014ರ ತರಬೇತಿ ಕಾರ್ಯಕ್ರಮಗಳು**

ದಿನಾಂಕ 05.03.2014 ರಂದು ಯುವಜನ ಹಾಗೂ ಸಹಕಾರ –ಸಹಕಾರ ಸಂವಾದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾಲಯ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗ, ಮಾನಸಗಂಗೋತ್ರಿ, ಮೈಸೂರಿನಲ್ಲಿ ಯುವ ಸಹಕಾರಿಗಳಿಗಾಗಿ ಹಮ್ಮಿಕೊಳ್ಳಲಾಗಿದೆ.

ದಿನಾಂಕ : 8 ಹಾಗೂ 9 ಮಾರ್ಚ್ 2014 ರಂದು ಎರಡು ದಿನಗಳ "ಕಾರ್ಯಕ್ಷಮತೆ ಅಭಿವೃದ್ಧಿ" ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಹಮ್ಮಿಕೊಳ್ಳಲಾಗಿದೆ.

ದಿನಾಂಕ 19.03.2014 ರಂದು ಯುವಜನ ಹಾಗೂ ಸಹಕಾರ –ಸಹಕಾರ ಸಂವಾದ ಕಾರ್ಯಕ್ರಮವನ್ನು ಗುಲ್ಬರ್ಗಾ ವಿಶ್ವವಿದ್ಯಾಲಯ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗ ಗುಲ್ಬರ್ಗಾದಲ್ಲಿ ಯುವ ಸಹಕಾರಿಗಳಿಗಾಗಿ ಹಮ್ಮಿಕೊಳ್ಳಲಾಗಿದೆ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ : ತರಬೇತಿ ಕಾರ್ಯಕ್ರಮ

ಸಹಕಾರಿಗೆ ನೂತನವಾಗಿ ನೇಮಕವಾಗಿರುವ 12 ಉದ್ಯೋಗಿಗಳಿಗೆ ದಿನಾಂಕ : 12–02–2014 ರಿಂದ ದಿನಾಂಕ : 15–02–2014ರವರೆಗೆ ತರಬೇತಿ ಕಾರ್ಯಾಗಾರವನ್ನು ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ, ಸರಕಾರಿ ಪದವಿ ಪೂರ್ವ ಕಾಲೇಜು ಪುತ್ತೂರು ಇಲ್ಲಿನ ಉಪನ್ಯಾಸಕರಾದ ಶ್ರೀ ಬಿ.ವಿ.ಸೂರ್ಯನಾರಾಯಣ, ಜೆ.ಸಿ. ತರಬೇತುದಾರ ಶ್ರೀ ಪಶುಪತಿಶರ್ಮ, ಕ್ಯಾಂಪ್ಕೊ ಸಂಸ್ಥೆಯ ಉಪ ಪ್ರಧಾನ ವ್ಯವಸ್ಥಾಪಕ ರಾದ ಶ್ರೀ ಕೃಷ್ಣಕುಮಾರ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ., ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು, ಹಿರಿಯ ಶಾಖಾ ವ್ಯವಸ್ಥಾಪಕಾರದ ಶ್ರೀ ಗೋಪಾಲಕೃಷ್ಣ ನಾಯಕ್, ಶಾಖಾ ವ್ಯವಸ್ಥಾಪಕರಾದ ಶ್ರೀ ಪ್ರೇಮಚಂದ್ರ ನಾಯಕ್, ಸಹಾಯಕ ಶಾಖಾ ವ್ಯವಸ್ಥಾಪಕರಾದ ಶ್ರೀ ಪ್ರವೀಣ ಎನ್, ಹಿರಿಯ ಅಧಿಕಾರಿ ಶ್ರೀ ಶಿವಪ್ರಸಾದ್ ಟಿ.ಇವರುಗಳು ವ್ಯಕ್ತಿತ್ವ ವಿಕಸನ, ಹಾಗೂ ಶಾಖಾ ವ್ಯವಹಾರಗಳು, ಸಹಕಾರಿ ಕೇತ್ರದ ಬಗ್ಗೆ ತರಬೇತಿ ನೀಡಿದರು. ದಿನಾಂಕ : 15–02–2014ರಂದು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಭಾಗವಹಿಸಿ ತರಬೇತಿಯಲ್ಲಿ ಭಾಗವಹಿಸಿದ ಉದ್ಯೋಗಿಗಳಿಗೆ ಶುಭ ಹಾರೈಸಿದರು.



ಬೈಲಹೊಂಗಲದ ರಾಣಿ ಚನ್ನಮ್ಮ ಸೌಹಾರ್ದ ಸಹಕಾರಿಯಲ್ಲಿ 13ನೇ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸಂಸ್ಥೆಯ 23ನೇ ಸಂಸ್ಥಾಪನಾ ದಿನಾಚರಣೆಯ ಧ್ವಜಾರೋಹಣವನ್ನು ಶಾಸಕ ಡಾ॥ ವಿಶ್ವನಾಥ ಪಾಟೀಲ್ ನೆರವೇರಿಸಿದರು.

# ಯುಗಾದಿ ಹಬ್ಬ ಸಹಬಾಳ್ವೆ ಹಾಗೂ ಸಮನ್ವಯತೆಯ ಪ್ರತೀಕ

**ಯುಗಾದಿ ಹಬ್ಬದ ಆಚರಣೆ :**

ಯುಗ – ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸವರುಷಕೆ – ಹೊಸಹರುಷವ
ಹೊಸತು ಹೊಸತು ತರುತಿದೆ
– ದ.ರಾ.ಬೇಂದ್ರೆ

ಹೌದು. ಪ್ರಕೃತಿಯು ತನ್ನ ಹಳೆಯ ತೊಗಲನ್ನು ಬಿಟ್ಟು ಹೊಸತೊಗಲನ್ನು ಮೈವೆತ್ತುತ್ತಾ ಬರುವ ಈ ಸುಸಮಯದಲ್ಲಿ ಇಡೀ ನಾಡು ಹೊಸತನದ ಗೆಟಪ್ಪಿನಲ್ಲಿದೆ. ಗಿಡ–ಮರ–ಬಳ್ಳಿಗಳು ತಮ್ಮ ಹಳೆಯ ರೂಪವನ್ನು ಬದಲಾಯಿಸಿಕೊಂಡು ಹೊಂಬಣ್ಣದ ಚಿಗುರೆಲೆಯನ್ನು ಹೊದ್ದು ಚಿನ್ನಾಟವಾಡುತ್ತಾ ತೂಗಾಡುತ್ತಿವೆ. ಸಂತನ ಆಗಮನದಿಂದ ಪುಳಕಿತರಾದಂತೆ ಇಡೀ ನಾಡು ತೋರುತ್ತಿದೆ. ಇಂತಹ ಹೊತ್ತಲ್ಲಿ ಇದಕ್ಕೆ ಸೆಡ್ಡು ಹೊಡೆಯುವಂತೆ ಸೂರ್ಯನು ತನ್ನ ರಣಬಿಸಿಲಿನಝುಳವನ್ನು ತೋರುತ್ತಾ ಕುಹಕವಾಡುವಂತೆ ಜನರು ಬೆವರಲ್ಲಿ ಮೀಯುತ್ತಾ ಬಸವಳಿದಿದ್ದಾರೆ.

ಆದರೂ ವಸಂತ ಋತುವಿನ ಚೆಲುವು, ಮೋಹಕತೆಗೆ ಆನಂದ ತುಂದಿಲರಾಗಿದ್ದಾರೆ. ಅಲ್ಲದೆ, ಬಿಸಿಲ ಬೇಗೆಯ ನಿವಾರಣೆಗೆ ಮದ್ದೆಂಬಂತೆ ಹೊಂಗೆಯ ನೆರಳು, ತುಂಗೆಯ ಕಂಪು, ಬೇವು–ಮಾವುಗಳ ಗೊಂಚಲು– ಗೊಂಚಲುಗಳ ತೊನೆದಾಟ ಬಸವಳಿದ ಮನಕ್ಕೆ ಉಲ್ಲಾಸ ನೀಡುವಂತಿದೆ. ಬಿಸಿಲ ಬೇಗೆಯನ್ನು ತುಂಗೆ ಹೂವಿನ ಕಂಪು, ಮರಿದುಂಬಿಗಳ ಝೇಂಕಾರ, ಹೊಂಗೆ ಮರದ ನೆರಳು ಕೊಂಚ ತಗ್ಗಿಸುವಂತಿವೆ... ಭಾರತೀಯ ಸಂಸ್ಕೃತಿಯಲ್ಲಿ 'ಯುಗಾದಿ ಹಬ್ಬ'ಕ್ಕೆ ತನ್ನದೇ ಆದ ಒಂದು ಅತ್ಯುನ್ನತವಾದ ಸಾಂಸ್ಕೃತಿಕ ಮಹತ್ವವಿದೆ.

ಆದುದರಿಂದ ಭಾರತೀಯರು ಅದರಲ್ಲೂ ದಕ್ಷಿಣ ಭಾರತದವರಲ್ಲಿ ಕರ್ನಾಟಕದ ಜನರು ತಮ್ಮ ಹೊಸ ವರುಷದ ದಿನವು 'ಯುಗಾದಿ'ಯ ದಿನದಿಂದಲೇ ಆರಂಭವಾಗುತ್ತದೆ ಎಂದು ನಂಬುತ್ತಾರೆ.

ಹೀಗೆ, ಯುಗಾದಿ ಹಬ್ಬವು ಜನರಲ್ಲಿ ಸಂಭ್ರಮ–ಸಡಗರ ನೀಡುವ ಜೊತೆಗೆ ಅವರ ಮನದಲ್ಲಿ ಹೊಸಭರವಸೆ, ಆಶಯ, ಗುರಿ, ಉದ್ದೇಶ, ಬಯಕೆ, ಕನಸನ್ನು ಚಿಗುರಿಸುತ್ತಾ ನವವರುಷಕ್ಕೆ ಆಶಾಕಿರಣವಾಗಿ ಬರುತ್ತಿದೆ; ಬಂದಿದೆ. ಗ್ರಾಮೀಣರ ಆಡುಮಾತಿನಲ್ಲಿ ಹೇಳುವುದಾದರೆ, ಯುಗಾದಿಯು "ಉಗಾದಿ" ಎನಿಸಿಕೊಳ್ಳುತ್ತದೆ. ಉಗಾದಿ ಹಬ್ಬವು ಶಿಶಿರ ಋತು ಕಳೆದು ವಸಂತನಾಗಮನದ ಮೊದಲ ಹಬ್ಬ. ಇದು ಭಾರತೀಯರ ಪಾಲಿಗೆ 'ನವ ಮನ್ವಂತರ', 'ಹೊಸ ವರುಷ'.

**ಮೊದಲ ದಿನ :** ಯುಗಾದಿಯಂದು ಹರಳೆಣ್ಣೆಯನ್ನು ಮೈ– ಕೈಗೆ ಹಚ್ಚಿಕೊಂಡು, ಸ್ನಾನಮಾಡಿ, ಹೊಸಬಟ್ಟೆ ತೊಟ್ಟು ಸಂಭ್ರಮಿಸುವುದು ವಾಡಿಕೆ. ಅಲ್ಲದೆ ಅಂದು ಜೀವನದ ಸಮನ್ವಯ ಸೂತ್ರದ ಸಂಕೇತವಾದ 'ಬೇವು–ಬೆಲ್ಲ ತಿನ್ನುವುದು' ಒಂದು ಸತ್ಸಂಪ್ರದಾಯಕ್ಕೆ ಬರೆದ ಮುನ್ನುಡಿಯಾಗುತ್ತದೆ. ಬೇವು–ಬೆಲ್ಲ ತಿನ್ನುವುದರ ಮೂಲ ಉದ್ದೇಶವಿಷ್ಟೆ; ಕಷ್ಟ–ಸುಖ, ನೋವು ನಲಿವು ಪ್ರತಿಯೊಬ್ಬರ ಬಾಳಲ್ಲಿ ಸಮನಾಗಿರಲಿ ಎಂಬುದು. ಇಂಥ ಸದ್ಭಾವನೆಯನ್ನು ಯುಗಾದಿ ಎಲ್ಲರಿಗೂ ತಿಳಿಸುತ್ತದೆ.

**ನಲಿವಿನ ದ್ಯೋತಕ–ಯುಗಾದಿ :** ಭಾರತೀಯ ಸಂಸ್ಕೃತಿಯಲ್ಲಿ 'ಯುಗಾದಿ ಹಬ್ಬ'ಕ್ಕೆ ತನ್ನದೇ ಆದ ಒಂದು ಅತ್ಯುನ್ನತವಾದ ಸಾಂಸ್ಕೃತಿಕ ಮಹತ್ವವಿದೆ. ಆದುದರಿಂದ ಭಾರತೀಯರು ಅದರಲ್ಲೂ ದಕ್ಷಿಣಭಾರತದವರಲ್ಲಿ ಕರ್ನಾಟಕದ ಜನರು ತಮ್ಮ ಹೊಸವರುಷದ ದಿನವು 'ಯುಗಾದಿ'ಯ ದಿನದಿಂದಲೇ ಆರಂಭವಾಗುತ್ತದೆ ಎಂದು ನಂಬುತ್ತಾರೆ. ಅದಕ್ಕಾಗಿಯೇ ಅಂದು ತಮ್ಮ ನೆಂಟರಿಷ್ಟರು, ಬಂಧು–ಬಾಂಧವರು, ಕುಟುಂಬವರ್ಗದವರೆಲ್ಲರೂ ಒಂದೆಡೆ ಸೇರಿ ಯುಗಾದಿಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಲು ತೊಡಗುತ್ತಾರೆ.

ಅದಕ್ಕಾಗಿಯೇ ದೊಡ್ಡ ಮರಗಳಿಗೆ ಜೋಕಾಲಿಗಳನ್ನು ಕಟ್ಟಿ ಉಯ್ಯಾಲೆಯಾಡುತ್ತಾ ಕೇಕೆ ಹಾಕಿ ಸಂಭ್ರಮಿಸುತ್ತಾ, ಖುಷಿಪಡುತ್ತಾರೆ.

ಇಂತಹ ಸಂಭ್ರಮದ ನೋಟಗಳನ್ನು ಕಾಣಬೇಕಾದರೆ ಗ್ರಾಮೀಣ ಭಾಗಕ್ಕೇ ಹೋಗಬೇಕು. ಆದರೆ, ಶುದ್ಧ ಮನರಂಜನಾತ್ಮಕವಾದ ಇಂಥ ಸಂಭ್ರಮದ ನೋಟಗಳು ನೋಡಲು ಇಂದು ವಿರಳವಾಗಿವೆ.

**– ಹುಲಿಯೂರು ಚಂದ್ರೇಗೌಡ.**

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

# ಘೋಷಣೆಯ ಕಾಲ ಮುಗಿದು ಮನ್ನಣೆಯ ಕಾಲ ಬಂದಿತೇ...?



▸▸ ಎನ್.ಇ. ಸವಿತ

ವಿಶ್ವದ ನಾನಾ ದೇಶಗಳಲ್ಲಿ "ಅಂತರಾಷ್ಟ್ರೀಯ ಮಹಿಳೆಯರ ದಿನ" ಆಚರಿಸುತ್ತಿದ್ದು, ಮಹಿಳೆಯರು ಒಂದೇ ಕ್ಷೇತ್ರಕ್ಕೆ ಮೀಸಲಾಗದೇ ರಾಷ್ಟ್ರೀಯವಾಗಿ, ಜನಾಂಗೀಯವಾಗಿ, ಭಾಷಾವಾರು, ಸಾಂಸ್ಕೃತಿಕ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರವಾಗಲಿ ಎಲ್ಲಾ ಕ್ಷೇತ್ರದಲ್ಲೂ ಪ್ರತಿಭಾನ್ವಿತ ರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ ಮಹಿಳೆಯರನ್ನು ಗುರುತಿಸಿ ಹೆಚ್ಚಿನ ಸ್ಥಾನಮಾನಗಳನ್ನು ಒದಗಿಸಲು ಪೂರಕವಾಗುವಂತೆ ಈ ದಿನವನ್ನು ಅವರಿಗೆ ಅರ್ಪಿಸಲಾಗಿದೆ.

ಸಂಯುಕ್ತ ರಾಷ್ಟ್ರಗಳು 1975ರಲ್ಲಿ ಮಾರ್ಚ್ 8ರಂದು ಮಹಿಳಾ ದಿನವನ್ನಾಗಿ ಆಚರಿಸಲು ಪ್ರಾರಂಭಿಸಿದವು. 1977ರಲ್ಲಿ "ದಿ ಜನರಲ್ ಅಸ್ಸೆಂಬ್ಲಿ" ಮಹಿಳೆಯರ ಹಕ್ಕು ಮತ್ತು ಶಾಂತಿ ಸ್ಥಾಪನೆಯನ್ನು ಆಯಾ ದೇಶದ ಸದಸ್ಯರು ಗಮನಿಸಿ ತಮ್ಮ ದೇಶದ ಐತಿಹಾಸಿಕ ಮತ್ತು ರಾಷ್ಟ್ರೀಯ ಸಂಪ್ರದಾಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವಂತೆ ಕರೆ ನೀಡಿತು. ಹೀಗೆ ಮಾಡಿದಾಗ ಮಹಿಳೆಯರ ಮೇಲೆ ನಡೆಯುತ್ತಿರುವ ಪಕ್ಷಪಾತವನ್ನು ಗಮನಿಸಿ ಅವರಿಗೆ ಸ್ಪರ್ಧಿಸುವ ಪೂರ್ಣ ಅವಕಾಶವನ್ನು ನೀಡುವಂತೆ ಘೋಷಿಸಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೊದಲ ಬಾರಿಗೆ ಹೊರಹೊಮ್ಮಿದ್ದು ಕೂಲಿ ಚಳುವಳಿ (labour movement) ಕಾರ್ಯದಲ್ಲಿ. ಉತ್ತರ ಅಮೇರಿಕ ಮತ್ತು ಯೂರೋಪ್ ಪ್ರದೇಶಗಳಲ್ಲಿ ನಡೆದಾಗ 1909ರಂದು ಸಂಯುಕ್ತ ಸಂಸ್ಥಾನಗಳಲ್ಲಿ ಮೊದಲ "ಅಂತರಾಷ್ಟ್ರೀಯ ಮಹಿಳೆಯರ ದಿನ ಫೆಬ್ರವರಿ 24 ರಂದು ಕಂಡು ಬಂತು. ಅಮೇರಿಕಾದ ಸಮಾಜವಾದಿ ಪಕ್ಷ ಈ ದಿನವನ್ನ ಕೆಲಸದ ಪರಿಸ್ಥಿತಿಯನ್ನು ವಿರೋಧಿಸಿ ನ್ಯೂಯಾರ್ಕ್ ನಗರದ ನಡೆದ 'ಸರ್ಕಾರಿ ಕಾರ್ಮಿಕರ ಚಳುವಳಿ'ಯಲ್ಲಿ ಪ್ರತಿಭಟಿಸಿ ಮಹಿಳೆಯರಿಗೆ ಅರ್ಪಿಸಲಾಯಿತು.

ಕೆಲವು ವರ್ಷಗಳ ನಂತರ ಸಂಯುಕ್ತ ರಾಷ್ಟ್ರಗಳು ಮತ್ತು ಅದರ ತಾಂತ್ರಿಕ ಏಜನ್ಸಿಗಳು ಮಾನವ ಹಕ್ಕುಗಳನ್ನು ಗಮನಿಸಿ ಮಹಿಳೆಯರಿಗೆ ಭಾಗವಹಿಸಲು ಅವಕಾಶವನ್ನು ನೀಡಿ ಪ್ರೋತ್ಸಾಹಿಸಿತು. ಇಂದು "ಅಂತರರಾಷ್ಟ್ರೀಯ ಮಹಿಳಾ ದಿನ"ವನ್ನು ವಿಶ್ವದಾದ್ಯಂತ ಆಚರಣೆ ಮಾಡಲು ಪ್ರೋತ್ಸಾಹಿಸುವುದರ ಜೊತೆಗೆ ಮಹಿಳೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದೆ. ಆದರೂ ಸಹ ಸಮಾಜದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಸಾಗಣಿಕೆ ಇವೆಲ್ಲವನ್ನು ಗಮನಿಸಿ ಸುಪ್ರಿಂ ಕೋರ್ಟ್ ಮಹಿಳೆಯರ ಸುರಕ್ಷತೆ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಿದೆ. ಮಹಿಳೆಯರಿಗೆ ಸಂಬಂಧಿಸಿದ ಪ್ರಕರಣಗಳ ತ್ವರಿತ ವಿಲೇವಾರಿ ಹಾಗೂ ಮಹಿಳೆಯರ ರಕ್ಷಣೆ ಬಗ್ಗೆ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆಯ ವಿಚಾರಣೆ ನಡೆಸಿದ ಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ಆದರೂ ಸಹ ದಿನಬೆಳಗಾದರೆ ಸಾಕು ಅನೇಕ ಕಡೆ ಅತ್ಯಾಚಾರ ಸುದ್ದಿಯೇ ಕಿವಿಗೆ ಅಪ್ಪಳಿಸುತ್ತದೆ. ಆದರೆ ಒಂದು ಮಹತ್ತರ ಸಂಗತಿಎಂದರೆ ಮಹಿಳೆ ಸುರಕ್ಷಿತವಾಗಿರುವ ಕೆಲವು ಸ್ಥಳಗಳ ಬಗ್ಗೆ ತಿಳಿಯುವುದು ಅಗತ್ಯ. ಹೆಣ್ಣುಮಕ್ಕಳು ತಮಗೆ ಇಷ್ಟವಾಗುವ ಉಡುಪುಗಳನ್ನು ಧರಿಸುವುದು ಸ್ವತಂತ್ರವಾಗಿ ಓಡಾಡುವುದು ಅವರ ಸ್ವಾತಂತ್ರ್ಯದ ಪ್ರತೀಕವನ್ನು ಈ ಸ್ಥಳಗಳಲ್ಲಿ ಕಾಣಬಹುದು.

ಡೆನ್ಮಾರ್ಕ್‌ನ ಕೂಪನ್ ಹೆಗನ್ ನಗರ ಹೆಣ್ಣುಮಕ್ಕಳಿಗೆ ಅತ್ಯಂತ ಸುರಕ್ಷಿತವಾದ ಸ್ಥಳವಾಗಿದೆ. ಇಲ್ಲಿ ಮಹಿಳೆಯರು ದಿನದ ಯಾವ ಸಮಯದಲ್ಲಿಯಾದರೂ ಭಯವಿಲ್ಲದೇ ಓಡಾಡಬಹುದು.

ಆಂಸ್ಟರ್ಡ್ಯಾಮ್, ಸ್ಟಾಕ್‌ಹೋಮ್, ಜ್ಯೂರಿಚ್ ಇದು ತುಂಬಾ ಶಾಂತವಾದ ಪ್ರದೇಶವಾಗಿದ್ದು ಮಹಿಳೆಯರಿಗೆ ಪುರುಷರಷ್ಟೆ ಸ್ವತಂತ್ರವಿದೆ. ವಿಯನ್ನಾ, ಸಿಂಗಾಪುರ್ – ಈ ಸುಂದರ ನಗರ ಸ್ವಚ್ಚತೆಗೆ ಮಾತ್ರವಲ್ಲ ಅತ್ಯಾಚಾರ ಮುಕ್ತ ನಗರ ಅಂತಲೂ ಕರೆಯಬಹುದು. ಇಲ್ಲಿಯ ಕಾನೂನು ಮಹಿಳೆಯರಿಗೆ ಹೆಚ್ಚಿನ ಸುರಕ್ಷತೆಯನ್ನು ನೀಡಿದೆ. ಸಿಯೋಲ್, ಜರ್ಮನಿಯ ಮ್ಯೂನಿಚ್, ಜಪಾನ್‌ನ ಟೋಕಿಯೋಗಳಲ್ಲಿ ಕೆಲಸ ವಿಧಾನವು ಮಹಿಳಾ ಸಂರಕ್ಷಣೆ ಹೇಳಿಮಾಡಿಸಿದಂತಿದೆ. ದುಬೈಯಲ್ಲಿ ಮಹಿಳೆಯರು ನಿರ್ಬಂಧವಿಲ್ಲದೇ ಅತ್ಯಾಚಾರದ ಭಯವಿಲ್ಲದೇ ಓಡಾಡಬಹುದು. ಹಾಗೇನಾದರು ಆದರೆ ಆ ಅತ್ಯಾಚಾರಿಯು ಮತ್ತೆ ಬದುಕಿರಲು ಸಾಧ್ಯವಿಲ್ಲ.

ಇಂತಹ ನಗರಗಳು ಬೇರೆ ದೇಶಗಳಲ್ಲಿರುವಾಗ ನಮ್ಮ ದೇಶದಲ್ಲಿ ನಾವುಗಳು ಯಾವಾಗ ಈ ವ್ಯವಸ್ಥೆಯನ್ನು ನಿರೀಕ್ಷಿಸಬಹುದು ಎಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ ಇದಕ್ಕೆ ಉತ್ತರ ದೊರಕುವುದು ಯಾವಾಗ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂತಹ ಕಾರ್ಯಕ್ರಮಗಳಿಂದ ನಮ್ಮ ದೇಶದಲ್ಲೂ ಸಹ ಹೆಣ್ಣು ಸ್ವಂತಂತ್ರವಾಗಿ ಓಡಾಡಬಹುದೆಂದು ಅವಳಿಗೆ ಎಲ್ಲಾ ರೀತಿಯ ರಕ್ಷಣೆಯನ್ನು ನೀಡುತ್ತಿದೆ ಎಂಬ ದೇಶವಾಗಲಿ ಎಂಬುದೆ ಈ ಆಚರಣೆಯ ಉದ್ದೇಶವಾಗಲಿ. ಮಹಿಳೆ ಎಷ್ಟೆ ಆತ್ಮವಿಶ್ವಾಸದಿಂದ ನಡೆದರು ಸರ್ಕಾರವು ಅವಳಿಗೆ ಭದ್ರವಾದ ರಕ್ಷಣೆಗಳೊಂದಿಗೆ ಮಹಿಳೆಗೆ ಆಗುವ ಅನ್ಯಾಯಗಳ ವಿರುದ್ಧ ಉಗ್ರ ಶಿಕ್ಷೆಯನ್ನು ವಿಧಿಸಿದಾಗ ಮಾತ್ರ ಸಾಧ್ಯ. ಹಾಗಾದಾಗ ಮಾತ್ರ ಮಾರ್ಚ್ 8 'ಅಂತರರಾಷ್ಟ್ರೀಯ ಮಹಿಳಾ ದಿನದ ಆಚರಣೆಗೆ ಮನ್ನಣೆ ಸಿಕ್ಕಂತಾಗಿ ಒಂದು ಅರ್ಥ ಬರಲು ಸಾಧ್ಯ. ಇನ್ನಾದರೂ ಮಹಿಳಾ ಸ್ವಾತಂತ್ರ್ಯ ಕೇವಲ ಘೋಷಣೆಯಾಗಿ ಉಳಿಯದೇ, ಮನ್ನಣೆ ಸಿಗುವ ಕಾಲ ಬಂದೀತೆ ಇದನ್ನು ನಿರೀಕ್ಷಿಸಬಹುದೆ? ■

ವಿಶೇಷ ಲೇಖನ

# ಭಾರತೀಯ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಸವಾಲುಗಳು

▸▸ ಡಾ.ಕೆ.ಸಿ.ಚಕ್ರವರ್ತಿ, ಡೆಪ್ಯೂಟಿ ಗವರ್ನರ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ । ಅನುವಾದ : ದಿವ್ಯ ಟಿ.

"ಬ್ಯಾಂಕಿಂಗ್ ಸಿಬ್ಬಂದಿಗಳ ಭವಿಷ್ಯ ರಕ್ಷಣೆಯು" ಆಸಕ್ತಿಕರ ವಿಷಯವಾಗಿದೆ. ಇಲ್ಲಿಯವರೆಗೂ ನೌಕರರ "ಪ್ರಸ್ತುತ ರಕ್ಷಣೆ"ಯ ಬಗ್ಗೆ ಮಾತ್ರ ತಿಳಿದಿದ್ದೆವು. ಬ್ಯಾಂಕಿಂಗ್ ವೃತ್ತಿಯು ಕಳೆದ ಕೆಲವು ವರ್ಷಗಳಿಂದ ಅಗಾಧ ಸವಾಲುಗಳನ್ನು ಪ್ರತಿರೋಧಗಳನ್ನು ಎದುರಿಸುತ್ತಿದೆ. ದೊಡ್ಡ ಪ್ರಶ್ನೆ ಎಂದರೆ ನಮ್ಮ ಬ್ಯಾಂಕುಗಳು ಭವಿಷ್ಯದಲ್ಲಿ ಅದರ ಅಸ್ತಿತ್ವದಲ್ಲಿ ಸುರಕ್ಷತೆಯಾಗಿರಬಹುದೆಂಬ ಹಂತವನ್ನು ತಲುಪಿವೆಯೇ? ಬ್ಯಾಂಕಿಂಗ್ ಸಿಬ್ಬಂದಿಗಳಿಗೆ ಭವಿಷ್ಯದಲ್ಲಿ ಬ್ಯಾಂಕುಗಳ ಪಟ್ಟಿಯಲ್ಲಿ ಅವರುಗಳಿಗೆ ಪ್ರಮುಖ ಪಾತ್ರ ಸಿಗಬಹುದೆಂಬುದರ ಬಗ್ಗೆಯೂ ಸ್ವಲ್ಪ ಸಂಶಯವಿದೆ. ಪ್ರಸ್ತುತತೆಯಲ್ಲಿ ಮಾನವ ಸಂಪನ್ಮೂಲದ ಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಬಹುದಾಗಿದೆ.

"ಬ್ಯಾಂಕಿಂಗ್ ಸಿಬ್ಬಂದಿಗಳ ಭವಿಷ್ಯ ರಕ್ಷಣೆ" ಎಂದರೆ ಭವಿಷ್ಯ-ರಕ್ಷಣೆ ವ್ಯವಸ್ಥೆಯು ಭವಿಷ್ಯದ ಆವೃತ್ತಿಗಳು, ಬೆಳವಣಿಗೆಗಳು ಇತ್ಯಾದಿಗಳ ಬಗ್ಗೆ ಯಾವುದೇ ಭರವಸೆ ನೀಡುವುದಲ್ಲ. ಅದಕ್ಕಿಂತ ಹೆಚ್ಚಾಗಿ ಭವಿಷ್ಯ-ರಕ್ಷಣೆ ವ್ಯವಸ್ಥೆಯು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕೆಂದು ನಿರೀಕ್ಷಿಸುತ್ತದೆ.

- ಸುಲಭವಾಗಿ ನಾಶಪಡಿಸಲಾಗದು. (Not easily destructible)
- ನಮ್ಯತೆ ಮತ್ತು ಹೊಂದಿಕೆ. (Flexible & adaptable)
- ತೀವ್ರ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ. (Ability to weather extreme challenges)
- ಹಳೆಯದಾಗದಿರುವುದು / ಅಳಿವಿಲ್ಲದಿರುವುದು. (Non-Obsolescence)

ವೈಯಕ್ತಿಕ ಬ್ಯಾಂಕ್ ಮಟ್ಟದಲ್ಲಿ "ರಕ್ಷಿಸುವುದು" (Proofing) ಎಂದರೆ ಪ್ರತಿಸ್ಪರ್ಧಿ ಬ್ಯಾಂಕುಗಳಿಂದ ತಮ್ಮ ಮಾನವ ಬಂಡವಾಳದ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ವ್ಯವಹಾರದ ಭವಿಷ್ಯದ ಅವಶ್ಯಕತೆಗಳನ್ನು ಪೂರೈಸುವಂತೆ ತಮ್ಮ ಮಾನವ ಶಕ್ತಿಯ ಅವಶ್ಯಕತೆಗಳನ್ನು ಯೋಜಿಸುವುದು ಎಂಬ ಅರ್ಥವನ್ನು ಸಹ ಹೊಂದಿದೆ. ಹಾಗಾಗಿ 'ಭವಿಷ್ಯ-ರಕ್ಷಣೆ'ಯ ಉದ್ದೇಶವು ಭವಿಷ್ಯದಲ್ಲುಂಟಾಗುವ ಪ್ರತಿಕೂಲ ಬೆಳವಣಿಗೆಗಳ ವಿರುದ್ಧ ನೌಕರರನ್ನು ತಯಾರು ಮಾಡುವುದಾಗಿದೆ. ನಿಸ್ಸಂದೇಹವಾಗಿ, ವೇಗವಾಗಿ ಬದಲಾಗುತ್ತಿರುವ ವ್ಯವಹಾರದ ಪರಿಸರ ಮತ್ತು ಹೊಸ ಬ್ಯಾಂಕುಗಳ ಪ್ರವೇಶವು ಬ್ಯಾಂಕುಗಳಿಗೆ ಹೊಸ ಸವಾಲುಗಳನ್ನು ಮುಂದೊಡ್ಡಿದೆ. ಅದಕ್ಕಾಗಿ ಕೌಶಲ್ಯಯುತ ಮತ್ತು ಪ್ರತಿಭಾವಂತ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕು. ಆದರೆ, ಅಸ್ತಿತ್ವದಲ್ಲಿರುವ ಬೆಳವಣಿಗೆಯ ಮಾನವ ಸಂಪನ್ಮೂಲಗಳು ಅಸ್ತಿತ್ವದಲ್ಲಿರುವ ಪರಿಸರದಲ್ಲಿನ ಅತ್ಯುತ್ತಮ ಪ್ರದರ್ಶನಕ್ಕೆ ಸಜ್ಜಾಗಬೇಕಾಗುವ ದೊಡ್ಡ ಸಮಸ್ಯೆ ಉಂಟಾಗಬಹುದು. ಅದಕ್ಕಾಗಿ ಬ್ಯಾಂಕಿಂಗ್ ಸಿಬ್ಬಂದಿಗಳ "ಭವಿಷ್ಯ-ರಕ್ಷಣೆ"ಗೆ ಪ್ರಯತ್ನಿಸುವುದರ ಬದಲಾಗಿ, ಬ್ಯಾಂಕುಗಳು ತನ್ನ ಸಿಬ್ಬಂದಿಗಳ "FoolProofing"ಗೆ ಪಯತ್ನಿಸಬೇಕು. ಸಿಬ್ಬಂದಿಗಳು ಏನನ್ನೂ ನಿರೀಕ್ಷಿಸುತ್ತಿದ್ದಾರೋ ಅದಕ್ಕೆ ತಕ್ಕಂತೆ ಅವರನ್ನು ತಯಾರಿಸುವುದೇ ಈಂಂಟಕಡಿಂಂಜುಟಿರ ಆಗಿದೆ. ಭಾರತದ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಕಾರ್ಯನಿರ್ವಹಣೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಬ್ಯಾಂಕಿಂಗ್ ಸಿಬ್ಬಂದಿಗಳ Foolproofingನ ಅವಶ್ಯಕತೆಯನ್ನು ಅಳೆಯಲು, ಪ್ರತಿಕೂಲ ಅಭಿವೃದ್ಧಿಯ ವಿರುದ್ಧ ಮಾತ್ರವಲ್ಲದೇ ಎಂದಿನಂತೆ ವ್ಯವಹಾರದ ಪರಿಸ್ಥಿತಿಯಲ್ಲಿಯೂ ಸಮರ್ಪಕವಾಗಿ ತಮ್ಮ ಪಾತ್ರವನ್ನು ಸೂಕ್ತವಾಗಿ ನಿರ್ವಹಿಸುವಂತೆ ಸಜ್ಜುಗೊಳಿಸುವುದಾಗಿದೆ.

**ಭಾರತದ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ (HRM) :** ಮಾನವ ಸಂಪನ್ಮೂಲ ನಿರ್ವಹಣೆಯನ್ನು ಮೂಲಭೂತವಾಗಿ ಸಂಕ್ಷಿಪ್ತವಾಗಿ ಹೇಳುವುದಾದರೆ ಸಿಬ್ಬಂದಿಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ "ಯೋಜನೆ, ಸಂಘಟನೆ, ನಿರ್ದೇಶನ ಮತ್ತು ನಿಯಂತ್ರಣ ಜೊತೆಗೆ ಸರಾಗವಾಗಿ ಮತ್ತು ಉತ್ಸಾಹದಿಂದ ಪ್ರಸಕ್ತ ಮತ್ತು ಭವಿಷ್ಯದ ಉದ್ಯೋಗಗಳನ್ನು ನಿರ್ವಹಿಸಲು ಬೇಕಾದ ಅರ್ಹತೆಯನ್ನು ಪಡೆಯಲು ಸಕ್ರಿಯಗೊಳಿಸುವಲ್ಲಿ ಕಾರ್ಯನಿರ್ವಹಿಸುವುದಾಗಿದೆ. ಬ್ಯಾಂಕುಗಳ ಮಾನವ ಸಂಪನ್ಮೂಲದ ಕಾರ್ಯಗಳು ಇತರೆ ಸಂಸ್ಥೆಗಳಿಗಿಂತ ಯಾವುದೇ ರೀತಿ ಭಿನ್ನವಾಗಿರುವುದಿಲ್ಲ. ಇದು ವ್ಯವಸ್ಥಿತ ಮತ್ತು ಯೋಜಿತ ರೀತಿಯಲ್ಲಿ ನೌಕರರ ಸಾಮರ್ಥ್ಯಗಳು, ಚಲನಾತ್ಮಕತೆ, ಪ್ರೇರಣೆ ಮತ್ತು ಪರಿಣಾಮಕಾರಿತ್ವದ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಅನ್ವೇಷಿಸುವ ನಿರಂತರ ಪ್ರಕ್ರಿಯೆಯಾಗಿದೆ. ಜೊತೆಗೆ ಇದು ನೌಕರರ ದೈಹಿಕ ಸಾಮರ್ಥ್ಯಗಳು, ಸಂಬಂಧಗಳು, ವರ್ತನೆಗಳು, ಮೌಲ್ಯಗಳು, ಜ್ಞಾನ ಮತ್ತು ಕೌಶಲ್ಯಗಳಲ್ಲಿ ಸುಧಾರಣೆಗಳನ್ನು ತರುವುದರ ಮೂಲಕ ಈ ಉದ್ದೇಶಗಳನ್ನು ಸಾಧಿಸುವುದರ ಮೇಲೆ ಬ್ಯಾಂಕ್ ನಿಂತಿದೆ.

ವಾಸ್ತವವಾಗಿ, 90ರ ದಶಕದ ಮೊದಲಿನ ಆರ್ಥಿಕತೆಯ ಆರಂಭದಲ್ಲಿ ಭಾರತೀಯ ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಮಾನವ ಸಂಪನ್ಮೂಲದ ಕಾರ್ಯವು ನಿರ್ಲಕ್ಷಕ್ಕೊಳಗಾಗಿದ್ದವು. ಸ್ಪರ್ಧೆಯ ಕೊರತೆ ಮತ್ತು ವಿಫುಲವಾಗಿ ಲಭ್ಯವಿದ್ದ ಅವಕಾಶಗಳಿಂದಾಗಿ ಹೆಚ್ಚಿನ ಶ್ರಮವಿಲ್ಲದೆಯೇ ಬ್ಯಾಂಕಿಂಗ್ ವಲಯವು ಲಾಭದಾಯಕತೆಯನ್ನು ಹೊಂದಿತ್ತು. ಉದಾರೀಕರಣದ ನಂತರದ ಆರ್ಥಿಕತೆಯಲ್ಲಿ ಇತರೆ ವಿಭಾಗಗಳಲ್ಲಿ ಹೊಸ ಉದ್ಯೋಗಗಳ ಲಭ್ಯತೆಯು ಅಭಿವೃದ್ಧಿಗೊಂಡು, ಬ್ಯಾಂಕಿಂಗ್ ವಲಯದಲ್ಲಿ ಸ್ವಲ್ಪ ಕದಲುವಿಕೆ ಉಂಟಾಯಿತು. ಇದಲ್ಲದೆ, ಬ್ಯಾಂಕಿಂಗ್ ವಲಯದಲ್ಲಿ ಹೊಸ ಸ್ಪರ್ಧೆಗಾರರ ಪ್ರವೇಶದೊಂದಿಗೆ ನವೀನ ಉತ್ಪನ್ನಗಳ ಜೊತೆಗೆ, ಇಡೀ ವ್ಯವಸ್ಥೆ ಮತ್ತು ಹಳೆಯ ಬ್ಯಾಂಕುಗಳು ನಿರ್ದಿಷ್ಟವಾಗಿ ಮಾನವ ಸಂಪನ್ಮೂಲಗಳ ಕೌಶಲ್ಯಗಳ ಗುಂಪಿನ ಅಂತರವನ್ನು ಎದುರಿಸಲು ಪ್ರಾರಂಭಿಸಿತು. ಹೊಸ ಖಾಸಗಿ ವಲಯದ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳು ಮಾರುಕಟ್ಟೆ ಸಂಬಂಧಿತ ಪರಿಹಾರ ರಚನೆಯ ಮೇಲೆ ತಂತ್ರಜ್ಞಾನ ಬೆಂಬಲಿತ ವಿತರಣಾ ಪ್ರಕ್ರಿಯೆಗಳ ಜೊತೆಗೆ ಪ್ರಾರಂಭಿಸಲು ಉದ್ದೇಶಿಸಿತ್ತು; ಅವುಗಳು ಯುವಜನತೆಯನ್ನು ಆಕರ್ಷಿಸುವಲ್ಲಿ ಮತ್ತು ಹೆಚ್ಚು ಪ್ರತಿಭೆಯುಳ್ಳ ಜೊತೆಗೆ ಹೊಸ ಕೌಶಲ್ಯಗಳು ಮತ್ತು ಸಾಮರ್ಥ್ಯಗಳುಳ್ಳ ಸಿಬ್ಬಂದಿಗಳನ್ನು ಪಡೆಯುವಲ್ಲಿ ಸಮರ್ಥರಾದರು. ಮತ್ತೊಂದೆಡೆ ಹಳೆಯ ಬ್ಯಾಂಕುಗಳು ಭಾರಿ ಅನಾನೂಕೂಲತೆಗಳೊಂದಿಗೆ ಹೊಸ ಸ್ಪರ್ಧೆಗಾರರೊಂದಿಗೆ ಪೈಪೋಟಿಗಿಳಿಯಬೇಕಾಯಿತು. ಹೊಸ ಬ್ಯಾಂಕುಗಳ ಆಕರ್ಷಕ ಪರಿಹಾರ ರಚನೆ ಮತ್ತು ಉತ್ತಮ ಭವಿಷ್ಯದ ಅಭಿವೃದ್ಧಿಯ ಅವಕಾಶಗಳಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳು

ಹೆಚ್ಚು ತರಬೇತಿ ಹೊಂದಿದ ಮಾನವ ಶಕ್ತಿಯನ್ನು ಕಳೆದುಕೊಳ್ಳುತ್ತಾ ಬಂದಿತು. ಈ ಎಲ್ಲಾ ಕಾರಣಗಳಿಂದಾಗಿ ಬ್ಯಾಂಕಿಂಗ್ ವಲಯದಲ್ಲಿ ಮಾನವ ಸಂಪನ್ಮೂಲದ ಕಾರ್ಯವು ಕೇವಲ ಊಹೆಯಿಂದಲೆ ಪ್ರಾಮುಖ್ಯತೆಯನ್ನು ಹೊಂದಿಲ್ಲ. ಆದರೆ ಇದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ.

### ಮಾನವ ಸಂಪನ್ಮೂಲದ ಸವಾಲುಗಳು

**1. ಉದ್ಯೋಗದ ಪಾತ್ರಗಳ ವ್ಯಾಖ್ಯಾನ : (Defining Job Roles)**

ಪ್ರತಿಯೊಂದು ಮಟ್ಟದಲ್ಲಿನ ಉದ್ಯೋಗದ ಪಾತ್ರವನ್ನು ವ್ಯಾಖ್ಯಾನಿಸಿದಾಗ, ಆ ಮಟ್ಟಕ್ಕೆ ಅವಶ್ಯಕವಾಗಿರುವ ಕೌಶಲ್ಯವಿರುವ ಸಿಬ್ಬಂದಿಗಳ ಅಗತ್ಯತೆಯು ತಿಳಿದು ಬರುತ್ತದೆ. ಆಗ, ಮಾನವ ಸಂಪನ್ಮೂಲವು ಈಗಾಗಲೇ ಅಸ್ತಿತ್ವದಲ್ಲಿರುವ ಲಭ್ಯವಿರುವ ಮಾನವ ಶಕ್ತಿಗೆ ತರಬೇತಿ ನೀಡುವುದರ ಮೂಲಕ ಅಥವಾ ಕೌಶಲ್ಯವಿರುವ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ನಕ್ಷೆಯನ್ನು ತಯಾರಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

**2. ಕಾರ್ಯಕ್ಷಮತೆಯ ಮಾಪನ ವ್ಯವಸ್ಥೆ : (Performance Measurement System)**

ಪ್ರತಿಭೆಯ ಜೊತೆಗೆ ನಂಬಿಕೆ ಮತ್ತು ಪಾರದರ್ಶಕತೆಯು ಮಾನವ ಸಂಪನ್ಮೂಲ ನಿರ್ವಾಹಕರ ಮುಖ್ಯ ಉದ್ದೇಶವಾಗಿದೆ ಹಾಗೂ ಪ್ರತಿಯೊಂದು ಸಂಘಟನೆಯ ಪ್ರವರ್ತನೆ ನಿಯಮದ ಗುರಿಯಾಗಿದೆ. ಕಾರ್ಯಕ್ಷಮತೆಯ ಮಾಪನ ವ್ಯವಸ್ಥೆಯು ಹೆಚ್ಚು ವಸ್ತುನಿಷ್ಠ ಮತ್ತು ಸಾಕಷ್ಟು ಬಾರಿ ಕೆಲಸದ ಸ್ಥಳದಲ್ಲಿನ ನಿಜವಾದ ನಿರ್ವಹಣೆಯನ್ನು ಹೊರತುಪಡಿಸಿ ಬೇರೆ ಅಂಶಗಳಿಂದಲೂ ಸಹ ನಿರ್ಧರಿಸಲಾಗುತ್ತದೆ. ವಾಸ್ತವವಾಗಿ, ಕಾರ್ಯಕ್ಷಮತೆಯ ರೇಟಿಂಗ್ ನೌಕರರನ್ನು ಉನ್ನತಮಟ್ಟಕ್ಕೇರಿಸುವ ಮಹತ್ವದ ಅಂಶವಾಗಿದೆ. ಆದರೆ ಸಾಕಷ್ಟು ಸಂಖ್ಯೆಯಲ್ಲಿ ಉತ್ತಮ ಜನರಿಲ್ಲದಿರುವ ಬಗೆಗಿನ ದೂರನ್ನು ಮಾನವ ಸಂಪನ್ಮೂಲವು ಮುಂದುವರಿಸಿದೆ. ಈ ಇಬ್ಭಾಗವು ಬ್ಯಾಂಕುಗಳಲ್ಲಿ ಅಸ್ತಿತ್ವದಲ್ಲಿರುವ ಕಾರ್ಯಕ್ಷಮತೆಯ ಮಾಪನ ವ್ಯವಸ್ಥೆಯ ವೈಫಲ್ಯತೆಗಳನ್ನು ತೋರಿಸುತ್ತಿದೆ.

ಪ್ರತಿ ವ್ಯಕ್ತಿಯ ಮುಂಗಡ ಕಾರ್ಯಕ್ಷಮತೆಯ ಮಾನದಂಡಗಳನ್ನು ಗುರುತಿಸುವ ಅಗತ್ಯವಿದ್ದು, ಅಲ್ಲಿಂದ ಅವರ ಕಾರ್ಯಕ್ಷಮತೆ ಮತ್ತು ರೇಟಿಂಗ್‌ನ್ನು ಅನುಸರಿಸಬೇಕು. ಕಾರ್ಯಕ್ಷಮತೆಯ ಮಾಪನ ವ್ಯವಸ್ಥೆಯ ವಸ್ತುನಿಷ್ಠತೆಯು ಕಾರ್ಯಕ್ಷಮತೆಯಲ್ಲಿ ಹೆಚ್ಚು ಶಿಸ್ತನ್ನು ತಂದಿರುವುದರಿಂದ ಇಂದು ಬ್ಯಾಂಕಿಂಗ್ ವ್ಯವಸ್ಥೆಯ ಉದ್ದಗಲಕ್ಕೂ ಬಳಸಲಾಗುತ್ತಿದೆ ಮತ್ತು ಅದಕ್ಕನುಸಾರವಾಗಿ ಅವರ ಪ್ರತಿಫಲ ಮತ್ತು ಪ್ರೇರಣೆಗಳ ಯೋಜನೆಗಳನ್ನು ರೂಪಿಸಲು ಬ್ಯಾಂಕುಗಳು ಶಕ್ತವಾಗುತ್ತಿದೆ.

ಪ್ರಮುಖವಾಗಿ ಗಳಿಸಬಹುದಾದ ಲಾಭವೆಂದರೆ ಉನ್ನತ ಮಟ್ಟದಲ್ಲಿ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿಲ್ಲದವರ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುತ್ತದೆ. ಕಾರ್ಯಕ್ಷಮತೆಯ ಮಾಪನ ವ್ಯವಸ್ಥೆಯು ತರಬೇತಿ ಮತ್ತು ವ್ಯಕ್ತಿಯ ಶಕ್ತಿ ಮತ್ತು ದೌರ್ಬಲ್ಯವನ್ನು ಆಧರಿಸಿ ಅಭಿವೃದ್ಧಿ ಕಾರ್ಯಕ್ರಮದ ವಿನ್ಯಾಸವನ್ನು ಸಕ್ರಿಯಗೊಳಿಸುತ್ತದೆ. ಈ ಅಂಶದ ಮುಖ್ಯ ಉದ್ದೇಶವೆಂದರೆ ವಸ್ತುನಿಷ್ಠ ಕಾರ್ಯಕ್ಷಮತೆ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರದಿದ್ದರೆ ಜನರನ್ನು ಉತ್ತಮಗೊಳಿಸಲು ಮತ್ತು ಬದ್ಧತೆಯನ್ನು ತರಲು ಸಾಧ್ಯವಿಲ್ಲ.

**3. ತರಬೇತಿ ಮತ್ತು ಅಭಿವೃದ್ಧಿ : (Training And Development)**

ಮೂರನೆಯ ಸವಾಲೆಂದರೆ ಬ್ಯಾಂಕುಗಳು ತರಬೇತಿ ಮತ್ತು ಅಭಿವೃದ್ಧಿಯ ಮೂಲಕ ಸಿಬ್ಬಂದಿಗಳ Foolproofing ನಿಂದ ಹೊರಬರಲು ಅಗತ್ಯವಿದೆ. ವಾಸ್ತವವಾಗಿ, ಬ್ಯಾಂಕ್‌ಗಳಲ್ಲಿನ ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ತರಬೇತಿ ಮತ್ತು ಅಭಿವೃದ್ಧಿಯು ಒಂದು ತೃಪ್ತಿಕರವಾಗಿಲ್ಲದ ಅಂಶವಾಗಿ ಉಳಿದಿದೆ. ತರಬೇತಿಗೆ ಸಂಬಂಧಿಸಿದಂತೆ ಪ್ರಮುಖವಾದ ಪ್ರದೇಶದಲ್ಲಿನ ವರ್ತನೆ ಅಂದರೆ ಮನೋಭಾವದ ಭಾಗವಾಗಿದೆ. ವರ್ತನೆಯ ತರಬೇತಿಯು ಮಾನವ ಸಂಪನ್ಮೂಲಗಳಲ್ಲಿನ ಅರಿವಿಲ್ಲದಿರುವ ಮತ್ತು ಅಡಗಿರುವ ಸಾಮರ್ಥ್ಯವನ್ನು ಅನ್ವೇಷಿಸಲು ಕೇಂದ್ರೀಕರಿಸುತ್ತದೆ, ಇದನ್ನೇ ಮಾನವ ಬಂಡವಾಳ ಎಂದು ಕರೆಯುತ್ತಾರೆ. ತಮ್ಮ ಮಾನವ ಸಂಪನ್ಮೂಲಗಳ ಶಕ್ತಿಯ ಮೇಲೆ ಒಂದು ಸ್ಪರ್ಧಾತ್ಮಕ ಲಾಭವನ್ನು ನಿರ್ಮಿಸುತ್ತದೆ.

- **ಸಿಬ್ಬಂದಿಗಳಿಗೆ ಪರಿಹಾರ : (Employees Compensation)**

ಯಾವುದೇ ಉದ್ಯಮದಲ್ಲಿ ಹೆಚ್ಚಾಗಿ ಸೇವಾಧಾರಿತ ಉದ್ಯಮದಲ್ಲಿ ಅಂದರೆ ಬ್ಯಾಂಕಿಂಗ್‌ನಲ್ಲಿ ನುರಿತ, ಅನುಭವವಿರುವ, ಜವಾಬ್ದಾರಿ ಇರುವ ನೌಕರರು ದೊರಕುವುದು ಮಾನವ ಸಂಪನ್ಮೂಲ ಇಲಾಖೆಗಳಿಗೆ ಒಂದು ಸವಾಲಾಗಿದೆ. ದೂರದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಪರಿಹಾರವನ್ನು ಏರಿಕೆ ಮಾಡುತ್ತಿರಬೇಕು. ಹಾಗಾಗಿ ಖಾಸಗಿ ಬ್ಯಾಂಕುಗಳಿಗಿಂತ ಸಾರ್ವಜನಿಕ ವಲಯದ ಬಾಂಕುಗಳಲ್ಲಿ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಏಕೆಂದರೆ ಅಲ್ಲಿನ ಸಿಬ್ಬಂದಿಗಳಿಗೆ ಹೆಚ್ಚಿನ ಬದ್ಧತೆ ಇದೆ.

- **ವೈವಿಧ್ಯತೆಯ ಸಂಬಳ ರಚನೆ : (Employees Compensation)**

ಬ್ಯಾಂಕುಗಳು ದೀರ್ಘ ಮತ್ತು ಮಧ್ಯಮಾವಧಿಗಳನ್ನು ಗಮನದಲ್ಲಿರಿಸಿ ಕೊಂಡು ನೇಮಕಾತಿ ನಿಯಮಗಳನ್ನು ಹಾಗೂ ಅಲ್ಲಿನ ಅಗತ್ಯಕ್ಕೆ ತಕ್ಕಂತೆ ಕೌಶಲ್ಯವಿರುವ ಸಿಬ್ಬಂದಿಗಳನ್ನು ಹೊಂದಿರಬೇಕು. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಪ್ರಾದೇಶಿಕ ವೈವಿಧ್ಯತೆಗಳಿಗನುಗುಣವಾಗಿ ವೈವಿಧ್ಯಮಯ ಸಂಬಳ ರಚನೆಯನ್ನು ಸೃಷ್ಟಿಸಿದೆ.

- **ಮೇಲಾಡಳಿತದ ಪಾತ್ರ : (Defferential Salary Structure)**

ಬ್ಯಾಂಕ್‌ನ ಮೇಲಾಡಳಿತದಲ್ಲಿ ಮಾನವ ಸಂಪನ್ಮೂಲವು ಸಿಬ್ಬಂದಿಗಳ ಆತಂಕವನ್ನು ಕಡಿಮೆ ಮಾಡುವುದರ ಜೊತೆಗೆ ಕಾರ್ಯಕ್ಷಮತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವಂತಿರಬೇಕು. ಜೊತೆಗೆ ಮಧ್ಯಮ ಮತ್ತು ಕೆಳವರ್ಗದ ಸಿಬ್ಬಂದಿಗಳ ನಿರೀಕ್ಷೆಗಳನ್ನು ಪೂರೈಸುವಂತೆ ಕಾರ್ಯ ನಿರ್ವಹಿಸಬೇಕು.

**4. ಮುಂದಿನ ದಾರಿ : (Road Ahead)**

ಈ ದಶಕವು ಬ್ಯಾಂಕುಗಳಿಗೆ ಅದರಲ್ಲೂ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿನ ಮಾನವ ಸಂಪನ್ಮೂಲ ವೃತ್ತಿಪರರಿಗೆ ತುಂಬಾ ಸವಾಲಾಗಿದೆ. ಏಕೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳು ನಿವೃತ್ತರಾಗುತ್ತಿದ್ದಾರೆ. ಇದು ಮಾನವ ಸಂಪನ್ಮೂಲಕ್ಕೆ ಸವಾಲಾಗಿರದೆ ಒಂದು ಉತ್ತಮ ಅವಕಾಶವೂ ಆಗಿದೆ. ಈ ನಿವೃತ್ತಿ ದಶಕದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗೆ ಒಳ್ಳೆಯ ಅವಕಾಶವಿದೆ. ಏಕೆಂದರೆ ಒಳ್ಳೆಯ ಪ್ರತಿಭೆ ಮತ್ತು ಕೌಶಲ್ಯವಿರುವ ಸಿಬ್ಬಂದಿಗಳನ್ನು ಅಗತ್ಯಕ್ಕನುಗುಣವಾಗಿ ತೆಗೆದುಕೊಳ್ಳಬಹುದು. ಹಾಗೆಯೇ ಸಾಂಖ್ಯಿಕ ಪರಿಕಲ್ಪನೆಯನ್ನು ಉಪಯೋಗಿಸಿಕೊಂಡು ಮಧ್ಯಮಾವಧಿಯಿಂದ ದೀರ್ಘಾವಧಿಗಾಗಿ ಮಾನವ ಶಕ್ತಿಯ ಅವಶ್ಯಕತೆಗಳನ್ನು ಪೂರೈಸಲು ಮತ್ತು ಉತ್ತಮ ಯೋಜನೆಗಳಿಂದ ಅವರನ್ನು ತಯಾರುಗೊಳಿಸಬಹುದಾಗಿದೆ. ಮಾಹಿತಿ ನಿರ್ವಹಣಾ ವ್ಯವಸ್ಥೆಯು ಮಾನವ ಶಕ್ತಿಯ ಯೋಜನೆಯನ್ನು ನಿರ್ಧರಿಸುವುದರ ಜೊತೆಗೆ ನಿವೃತ್ತಿ, ಆಯ್ಕೆ, ನೇಮಕಾತಿ, ಕಾರ್ಯಕ್ಷಮತೆ ನಿರ್ವಹಣೆ ಇತ್ಯಾದಿಗಳನ್ನು ರಚಿಸುತ್ತದೆ. ■

# Section 80P(4) applies only to to co-operative bank Not to Co-Operative Credit Society

**Ahmdabad High Court**

Sub-section(4) of section 80P will not apply to an assessee which is not a co-operative bank. In the case clarified by CBDT, Delhi Coop Urban Thrift & Credit Society Ltd. was under consideration.

Circular clarified that the said entity not being a co-operative bank, section 80P(4) of the Act would not apply to it. In view of such clarification,we cannot entertain the Revenue's contention that section 80P(4) would exclude not only the co-operative banks other than those fulfilling the description contained therein but also credit societies, which are not co-operative banks. In the present case, respondent assessee is admittedly not a credit co-operative bank but a credit co-operative society.

Exclusion clause of sub-section(4) of section 80P, therefore, would not apply.

HIGH COURT OF GUJARAT AT AHMEDABAD

TAX APPEAL NO. 442 of 2013

TAX APPEAL NO. 443 of 2013

TAX APPEAL NO. 863 of 2013

COMMISSIONER OF INCOME TAX, GANDHINAGAR

Versus

JAFARI MOMIN VIKAS CO-OP CREDIT SOCIETY LTD.

Date : 15/01/2014

ORAL ORDER

(PER : HONOURABLE MR.JUSTICE AKIL KURESHI)

1. All the assessees' Tax Appeals involve identical question.

2. Revenue has challenged the judgment of the Income Tax Appellate Tribunal (for short "the Tribunal") raising following question for our consideration:-

" Whether the Hon'ble Tribunal is correct in allowing deduction under section 80P(2) (a) (i) to assessee's society even though same is covered under section 80P(4) rws 2(24) (viia) being income from providing credit facilities carried on by a co-operative society with its member?"

3. Issue pertains to interpretation of section 80P(2) and 80P(4) of the Income Tax Act, 1964 ("the Act" for short). Respondent assessee is a Cooperative Credit Society and claims benefit of deduction under section 80P(1) of the Act by virtue of the provisions contained in section 80P(2) (a) (i) of the Act. As is well known under sub-section(1) of section 80P certain co-operative societies are granted deductions of the sum specified in sub-section(2) in computing the total income. As per section 80P(2) (a) (i), the sums referred in sub-section(1) would be in case of a co-operative society engaged in carrying on the business of banking or providing credit facilities to its members the whole of the amount of profits and gains of business attributable to any one or more of such activities. Revenue, however, contends that by virtue of newly amended sub-section(4) of section 80P inserted with effect from 1.4.2007 by Finance Act, 2006, section 80P would not apply to the respondent assessee. Section 80P(4) in the present form refers as under:-

"(4) The provisions of this section shall not apply in relation to any co-operative bank other than a primary agricultural credit society or a primary co-operative agricultural and rural development bank. Explanation- For the purposes of this sub section,-

(a) "co-operative bank" and "primary agricultural credit society" shall have the meanings respectively assigned to them in Part V of the Banking Regulation Act, 1949(10 of 1949) ;

(b) "primary co-operative agricultural and rural

development bank" means a society having its area of operation confined to a taluk and the principal object of which is to provide for long-term credit for agricultural and rural development activities."

4. As per section 80P(4), the provisions of section 80P would not apply in relation to any cooperative bank other than primary agricultural credit society or primary co-operative agricultural and rural development bank. As per the explanation, the terms "co-operative bank" and "primary agricultural credit society" shall have the meanings respectively assigned to them in Part V of the Banking Regulation Act, 1949.

5. Assessing Officer held that by virtue of section 80P(4), the respondent assessee would not be entitled to benefits of deduction under section 80P. CIT(Appeals) as well as the Tribunal reversed the decision of the Assessing Officer on the premise that the respondent assessee not being a bank, exclusion provided in sub-section(4) of section 80P would not apply. This, irrespective of the fact that the respondent would not fall within the expression "primary agricultural credit society".

6. Had this been the plain statutory provisions under consideration in isolation, in our opinion, the question of law could be stated to have arisen. When, as contended by the assessee, by virtue of sub section(4) only co-operative banks other than those mentioned therein were meant to be excluded for the purpose of deduction under section 80P, a question would arise why then Legislature specified primary agricultural credit societies along with primary co¬operative agricultural and rural development banks for exclusion from such exclusion and in other words, continued to hold such entity as eligible for deduction. However, the issue has been considerably simplified by virtue of

CBDT circular No.133 of 2007 dated 9.5.2007. Circular provides as under:-

"Subject: Clarification regarding admissibly of deduction under section 80P of the Income-Tax Act, 1961.

1. Please refer to your letter no.DCUS/30688/2007, dated 28.03.2007 addressed to Chairman, Central Board of Direct Taxes, on the above given subject.

2. In this regard, I have been directed to state that sub-section(4) of section 80P provides that deduction under the said section shall not be allowable to any co-operative bank other than a primary agricultural credit society or a primary co-operative agricultural and rural development bank. For the purpose of the said sub-section, co-operative bank shall have the meaning assigned to it in part V of the Banking Regulation Act, 1949.

3. In part V of the Banking Regulation Act, "Co-operative Bank" means a State Co-operative bank, a Central Co-operative Bank and a primary Co-operative bank.

4. Thus, if the Delhi Co op Urban T & C Society Ltd. does not fall within the meaning of "Cooperative Bank" as defined in part V of the Banking Regulation Act, 1949, sub section(4) of section 80P will not apply in this case.

5. The issues with the approval of Chairman, Central Board of Direct Taxes."

7. From the above clarification, it can be gathered that sub-section(4) of section 80P will not apply to an assessee which is not a co-operative bank. In the case clarified by CBDT, Delhi Coop Urban Thrift & Credit Society Ltd. was under consideration. Circular clarified that the said entity not being a cooperative bank, section 80P(4) of the Act would not apply to it. In view of such clarification,we cannot entertain the Revenue's contention that section 80P(4) would exclude not only the co-operative banks other than those fulfilling the description contained therein but also credit societies, which are not cooperative banks. In the present case, respondent assessee is admittedly not a credit co-operative bank but a credit co-operative society. Exclusion clause of sub-section(4) of section 80P, therefore, would not apply. In the result, Tax Appeals are dismissed

# ಜಾಮೀನುದಾರರ ಜವಾಬ್ದಾರಿ ಹಾಗೂ ಹೊಣೆಗಾರಿಕೆಗಳು

▸▸ **ಜಿ.ಎಸ್. ಟೊಪಣ್ಣವರ,** ರಿಜಿನಲ್ ಮ್ಯಾನೇಜರ್

1. ಸಹಕಾರಿ ಸಂಸ್ಥೆಗಳಲ್ಲಿ ಯಾವುದೇ ಸದಸ್ಯರ ಸಾಲಕ್ಕೆ ಅಥವಾ ಯಾವುದೇ ಇನ್ನಿತರ ವ್ಯವಹಾರಗಳಿಗೆ ಜಾಮೀನು ಆಗುವವರು ಸಂಸ್ಥೆಯಲ್ಲಿ ಕಡ್ಡಾಯವಾಗಿ ಸದಸ್ಯರಾಗಿರಬೇಕು ಅಂತಹವರು ಮಾತ್ರ ಜಾಮೀನಾಗಲು ಅರ್ಹತೆ ಪಡೆದಿರುತ್ತಾರೆ.
2. ಸಂಸ್ಥೆಯಲ್ಲಿ ಯಾವುದೇ ಸದಸ್ಯರ ಸಾಲಗಳಿಗೆ ಜಾಮೀನು ಆಗುವ ಸದಸ್ಯರು ತಮ್ಮ ಜಾಮೀನು ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಜಾಮೀನು ಆಗಲು ಒಪ್ಪುವಕ್ಕಿಂತ ಮುಂಚೆ ಈ ಕೆಳಗಿನ ಪ್ರಶ್ನೆಗಳಿಗೆ ತಾವು ಸಮರ್ಪಕ ಸ್ಪಷ್ಟಿಕರಣ ತಾವು ಸ್ವತಹಃ ಅಧ್ಯಯನದ ಮೂಲಕ ತಿಳಿದುಕೊಂಡಿರಬೇಕು.

- ಯಾರಿಗೆ ಜಾಮೀನು ಆಗಬೇಕಾಗಿದೆ?
- ಆ ವ್ಯಕ್ತಿ ಯಾರು? (Identification) ಗುರುತಿನ ದೃಷ್ಟಿಯಿಂದ
- ಅವನು ಯಾವ ಉದ್ದೇಶಕ್ಕೆ ಸಾಲ ಪಡೆಯುತ್ತಿದ್ದಾನೆ?
- ಅವನು ಪಡೆಯುವ ಸಾಲವೆಷ್ಟು?
- ಅವನು ಮಾಡುವ ಉದ್ಯೋಗವೇನು? ಅದರಲ್ಲಿ ಅವನಿಗೆ ದೊರೆಯುವ ಈಗೀನ ಉತ್ಪನ್ನಗಳೇನು? ಅವನ ವ್ಯವಹಾರದ ಪದ್ಧತಿಗಳೇನು? ಉಳಿತಾಯಗಳೇನು?
- ಈಗಾಗಲೇ ಬೇರೆ ಬೇರೆ ಕಡೆಗಳಲ್ಲಿ ಪಡೆದ ಸಾಲದ ವ್ಯವಹಾರಗಳಲ್ಲಿ ನಡೆದುಕೊಂಡ ರೀತಿಗಳೇನು?
- ಸಾಲ ಪಡೆಯುವವನ ಸ್ವಭಾವ, ನಡತೆ ಆರ್ಥಿಕ ಸ್ಥಿತಿಗತಿಗಳೇನು?
- ಅವನು ಪಡೆಯುವ ಸಾಲಕ್ಕೆ ಮರುಪಾವತಿ ಮಾಡುವ ಅವನ ಯೋಜನೆ ಮತ್ತು ಅವಕಾಶಗಳೇನು?
- ಅವನು ಪಡೆಯುವ ಸಾಲಕ್ಕೆ ಕೊಡುತ್ತಿರುವ ಭದ್ರತೆಗಳೇನು?
- ಪಡೆಯುವ ಸಾಲದ ಮೊತ್ತಕ್ಕೆ ಭದ್ರತೆಯ ಮೌಲ್ಯದ ಅನುಪಾತಗಳೇನು?
- ಅವನು ಕೈಕೊಳ್ಳುವ ಸಾಲದ ಉದ್ದೇಶ ನೀಜವಾಗಿಯೂ ಕಾರ್ಯಗತ ವಾಗುವುದು ಹೇಗೆ?
- ಅವನ ಸಾಲದ ಉದ್ದೇಶದಲ್ಲಿ ಜಾಮೀನು ಆಗುವವರು ನಿಜವಾಗಿಯೂ ಜವಾಬ್ದಾರಿಯಿಂದ ಸೂಕ್ತವಾಗಿ ಮುಂದಿನ ದಿನಗಳಲ್ಲಿ ಮುಕ್ತವಾಗಬಹುದು ಹೇಗೆ?




3. ಸಮಾಜದಲ್ಲಿ ಒಬ್ಬರು ಮತ್ತೊಬ್ಬರಿಗೆ ಸಹಾಯವಾಗಲು ಹಾಗೂ ಅನಿವಾರ್ಹ ಪ್ರಸಂಗಳಲ್ಲಿ ಸಹಾಯ ಪಡೆಯಲು ಜಾಮೀನು ಪಡೆಯುವುದು ಹಾಗೂ ಆಗುವುದು ಸರ್ವಸಾಮಾನ್ಯ ಹಾಗೂ ಬಹಳಷ್ಟು ವೇಳೆ ಅನಿವಾರ್ಯವಾಗಿರುತ್ತದೆ. ಆದರೇ ಮೇಲಿನ ಅಂಶಗಳಲ್ಲಿ ಜಾಮೀನು ಆಗುವವರು ತಮ್ಮ ಪಾಲಿನ ಹಣಕಾಸಿನ ಜವಾಬ್ದಾರಿ (Financial Risk) ಎಷ್ಟರಮಟ್ಟಿಗೆ ಆಗಬಹುದು ಎಂಬುದನ್ನು ಅರಿಯುವುದು ಸೂಕ್ತವಾಗಿರುತ್ತದೆ. ಚಿಕ್ಕ ರಕ್ಕಮಿಗೆ ಜಾಮೀನು ಆಗುವವರು ತೊಂದರೆದಾಯಕವಾಗುವುದಿಲ್ಲ. ಆದರೇ ಬಹಳಷ್ಟು ದೊಡ್ಡ ಮೊತ್ತದ ಸಾಲದ ರಕ್ಕಮುಗಳಿಗೆ/ಪ್ರಾಜೆಕ್ಟ್‌ಗಳಿಗೆ ಜಾಮೀನು ಆಗುವಾಗ ಸದಸ್ಯರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ಜಾಮೀನು ಹೊರೆ ಹೊರುವುದು ಉತ್ತಮ.
4. ಸಾಲಗಾರನು ಸಾಲ ಮರುಪಾವತಿ ಮಾಡದೇ ಇದ್ದಲ್ಲಿ ಸಾಲಗಾರರ ಜೊತೆಗೆ ಜಾಮೀನುದಾರನು ಸದರಿ ಸಾಲವನ್ನು ಬಡ್ಡಿ ಜೊತೆಗೆ ಮರುಪಾವತಿ ಮಾಡುವ ಜವಾಬ್ದಾರಿಯನ್ನು ಸರ್ವಸಾಮಾನ್ಯವಾಗಿ ಹಾಗೂ ಸರಿಸಮಾನವಾಗಿ ಹೊಂದಿರುತ್ತಾನೆ. ಈ ವಿಷಯವನ್ನು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ. ಸಾಲದ ಮರುಪಾವತಿ ಆಗದೇ ಇದ್ದಾಗ ಆರ್ಥಿಕ ಸಂಸ್ಥೆಗಳು ಸಾಲವಸೂಲಿಗಾಗಿ ನ್ಯಾಯಾಲಯಗಳಲ್ಲಿ ದಾವೆ ಮಾಡಿದಲ್ಲಿ ನ್ಯಾಯಾಲಯವು ಸಂಸ್ಥೆಯ ಸಾಲ ಮರುಪಾವತಿಗೆ ಸಾಲಗಾರರನ್ನು ಜಾಮೀನುದಾರರ ಜೊತೆಗೆ ಸರಿಸಮನವಾಗಿ ಹಾಗೂ ಪ್ರತ್ಯೇಕ ಹಾಗೂ ಜಂಟಿಯಾಗಿ ಜವಾಬ್ದಾರರೆಂದು (Severally and Jointly Responsible and Liable) ಸರ್ವಸಾಮಾನ್ಯವಾಗಿ ತೀರ್ಪು ನೀಡುತ್ತದೆ.
5. ಕೆಲವೊಂದು ಸಾಲಗಳ ಕರಾರು ಪತ್ರಗಳಲ್ಲಿ ಜಾಮೀನುದಾರರು ಸಾಲಗಾರ ಸಾಲಕ್ಕೆ ನೇರ ಹೊಣೆಗಾರನಲ್ಲ ಎಂದು ಉಲ್ಲೇಖವಾಗಿದ್ದಾಗ ಮಾತ್ರ ಜಾಮೀನುದಾರರು ತುಸು ಸೇಫ್. ಸಾಲಗಾರನಿಂದ ಸಾಲ ಹಿಂಪಡೆಯುವ ಎಲ್ಲಾ ಮಾರ್ಗೋಪಾಯಗಳು ವಿಫಲವಾದಾಗ ಸಂಸ್ಥೆಗಳು, ಜಾಮೀನುದಾರನ ಮೇಲೆ ದಾವೆ ಹೂಡುತ್ತವೆ. ಆದರೇ ಇಂತಹ ಉದಾಹರಣೆಗಳು ತೀರ ವಿರಳವಾಗಿರುತ್ತವೆ. ಇಂತಹ ಪ್ರಸಂಗಗಳಲ್ಲಿ ಸಹ ಸಾಲ ರಕ್ಕಮು ಪೂರ್ತಿಯಾಗಿ ವಸೂಲಾಗು ವವರೆಗೆ ಜಾಮೀನುದಾರರ ಜವಾಬ್ದಾರಿಯು ತಪ್ಪಿದ್ದಲ್ಲ.
6. ಭಾರತೀಯ ಗುತ್ತಿಗೆ ಕಾಯ್ದೆ (Indian Contract)ರ 130ನೇ ಕಲಂ ಪ್ರಕಾರ ಜಾಮೀನುದಾರರಿಗೆ ಜಾಮೀನು ಹೊಣೆಗಾರಿಕೆಯನ್ನು ತ್ಯಜಿಸಲು ಅವಕಾಶ ನೀಡಬಹುದು. ಆದರೇ ಉತ್ತರದಾಯಿತ್ವ (Continuity of liabilities) ಚಾಲ್ತಿಯಲ್ಲಿದ್ದರೆ ಅದು ಅವರನ್ನು ಯಾವುದೇ ರೀತಿಯಿಂದ ಕಾಪಾಡುವುದಿಲ್ಲ. ಆದ್ದರಿಂದ ಸಾಲಗಾರರಿಗೆ ಜಾಮೀನುದಾರರಾಗುವ ಮೊದಲು ಸರಿಯಾಗಿ ಯೋಚಿಸಿ. ಸಾಲಗಾರರು ಸಾಲ ಪಡೆಯಲು ನಿಜವಾಗಿಯೂ

ಸಮರ್ಥರಾಗಿದ್ದಲ್ಲಿ ಮಾತ್ರ ಅವರಿಗೆ ಜಾಮೀನು ನೀಡಬಹುದು. ಇಲ್ಲವಾದಲ್ಲಿ ಯಾರದೋ ಕಷ್ಟಕ್ಕೆ ಸಹಾಯವಾಗಲು ಹೋಗಿ ಪಡಬಾರದ ಸಂಕಟವನ್ನು ಅನುಭವಿಸಬೇಕಾಗಬಹುದು. ಕೆಲವೊಂದು ವೇಳೆ ಜಾಮೀನು ಆದವರ ನಿರೀಕ್ಷೆ ಮೀರಿದಲ್ಲಿ ಎಲ್ಲವೂ ಅವರ ಮೇಲೆ ಎರಗಿ ಮಾಡಿದ ತಪ್ಪಿಗೆ ಬೆಲೆ ತೆರಬೇಕಾಗುತ್ತದೆ.


### ಸಾಲಗಳ ವ್ಯವಹಾರದಲ್ಲಿ ಜಾಮೀನುಗಳನ್ನು ಪಡೆಯುವಲ್ಲಿ ಆರ್ಥಿಕ ಸಂಸ್ಥೆಗಳ ಜವಾಬ್ದಾರಿಗಳು

1. ಸಹಕಾರಿ ಸಂಸ್ಥೆಗಳು ಕಾನೂನು ಹಾಗೂ ಉಪವಿಧಿಗಳ ಪ್ರಕಾರ ಯಾವುದೇ ಸಾಲ, ಠೇವು ಹಾಗೂ ಇತರ ಜವಾಬ್ದಾರಿಯುತ / ಆರ್ಥಿಕ ವ್ಯವಹಾರಗಳನ್ನು ಸದಸ್ಯರ ಜೊತೆಗೆ ಮಾತ್ರ ಮಾಡಬೇಕಾಗುತ್ತದೆ. ಈ ವ್ಯವಹಾರಗಳಲ್ಲಿ ಸಾಲಪಡೆಯುವವರು, ಜಾಮೀನು ಆಗುವವರು, ಸಂಸ್ಥೆಯ ಯಾವುದೇ ಇತರ ಆರ್ಥಿಕ ವ್ಯವಹಾರಗಳ ಹೊಣೆಗಾರಿಕೆಗಳು ಇರಬಹುದು.
2. ಆರ್ಥಿಕವಾಗಿ ಅಬಲ, ಸುಸ್ಥಿದಾರರಾಗಿ ಮುಂದುವರೆದ ಉತ್ತಮ ಚಾರಿತ್ರ್ಯ / ವ್ಯವಹಾರಗಳು ಇಲ್ಲದ ಸದಸ್ಯರು ಸಹಕಾರಿಯಲ್ಲಿ ಯಾವುದೇ ಸದಸ್ಯರಿಗೆ ಜಾಮೀನು ಆಗಿದ್ದಲ್ಲಿ ಅಂತಹ ಜಾಮೀನುಗಳನ್ನು ಸ್ವೀಕರಿಸುವುದು ಸೂಕ್ತವಲ್ಲ.
3. ಕೆಲವು ವೇಳೆ ಯಾವುದೇ ಕಾರಣಕ್ಕೆ ಸುಸ್ಥಿದಾರರಾಗಿದ್ದು ನಂತರ ಸುಸ್ಥಿ ಸಾಲ ಪೇಮೆಂಟ ಮಾಡಿದ್ದಲ್ಲಿ / ಮಾಡಿಸಿದ್ದಲ್ಲಿ ಜಾಮೀನು ಆಗುವ ವೇಳೆಗೆ ಅವರ ಆರ್ಥಿಕ ಸ್ಥಿತಿ–ಗತಿಗಳು ಉತ್ತಮಕೊಂಡಿದ್ದಲ್ಲಿ ಅಂತಹವರ ಜಾಮೀನುಗಳನ್ನು ಸ್ವೀಕರಿಸಬಹುದಾಗಿದೆ.
4. ಸದಸ್ಯರಿಗೆ ತಮ್ಮ ಸಾಲಕ್ಕಾಗಿ ಕೆಲವು ಪ್ರಸಂಗಗಳಲ್ಲಿ ಅನಿವಾರ್ಯವಾಗಿ ಸಹಕಾರಿಯ ನಿಯಮಗಳ ಪ್ರಕಾರ ಜಾಮೀನು ಪಡೆಯಬೇಕಾಗುತ್ತದೆ. ಇಲ್ಲದ್ದಿದ್ದರೆ ಅಂತಹವರಿಗೆ ಸಾಲಗಳನ್ನು ಮಂಜೂರಿ ಮಾಡಲಾಗದು. ಈ ಕ್ರಿಯೆಯು ಉತ್ತಮವಾಗಿ ಜರುಗದಿದ್ದಲ್ಲಿ ಸಹಕಾರಿಯ ವ್ಯವಹಾರಗಳು ಸುರುಳಿತವಾಗಿ ಜರುಗುವುದಿಲ್ಲ ಹಾಗೂ ಸದಸ್ಯರಿಗೆ ಸೇವೆ ಕೊಡಲು ಸಾಧ್ಯವಿಲ್ಲ.
5. ಯಾವುದೇ ಸಾಲದ ಅರ್ಜಿಯು ಬಂದಾಗ ಸಾಲ ಪಡೆಯುವವರ ಸಾಲದ ಉದ್ದೇಶ, ಬೇಡಿದ ಸಾಲದ ರಕ್ಕಮು, ಅವನು ತನ್ನ ಸದರಿ ಸಾಲಕ್ಕೆ ಕೊಡುವ ಭದ್ರತೆಗಳು, ಅವುಗಳ ಮೌಲ್ಯಗಳು, ಸದರಿ ಸಾಲಕ್ಕೆ ಅನುಗುಣವಾಗಿ ಅವಶ್ಯವಿರುವ ಜಾಮೀನುಗಳು ಹಾಗೂ ಅವನು ಒದಗಿಸುವ ಜಾಮೀನುದಾರರಲ್ಲಿ ಇರಬೇಕಾದ ಆರ್ಥಿಕ ಸ್ಥಿತಿ–ಗತಿಗಳು ಹಾಗೂ ಇತರೆ ಅರ್ಹತೆಗಳ ಬಗ್ಗೆ ಪರಿಶೀಲಿಸಿ ಸಾಲದ ಅರ್ಜಿಗೆ ಸೂಕ್ತ ಜಾಮೀನುಗಳನ್ನು ಪಡೆಯುವ ವಿಷಯದಲ್ಲಿ ಸಹಕಾರಿಯು ಎಲ್ಲ ಅವಶ್ಯಕ ಕ್ರಮಗಳನ್ನು ಕೈಕೊಳ್ಳಬೇಕು.
6. ಸಾಲಗಾರರ ಜೊತೆಗೆ ಜಾಮೀನುದಾರರು ಸಹ ಮಂಜೂರಿಯಾದ ಸಾಲಗಳ ಜವಾಬ್ದಾರಿಗಳು ಹಾಗೂ ಕರಾರುಗಳ ಬಗ್ಗೆ ಪೂರ್ತಿ ಮಾಹಿತಿ ಒದಗಿಸಬೇಕು.
7. ಎಷ್ಟೋ ಸಾಲದ ವ್ಯವಹಾರಗಳಲ್ಲಿ ಸಾಲಗಾರರು ಸಾಲ ಪಡೆಯುವ ಅರ್ಹತೆ, ಸಾಲದ ಅವಶ್ಯಕತೆ, ಉದ್ದೇಶ, ಉತ್ಪನ್ನಗಳಿಸುವ ಸಾಮರ್ಥ್ಯಗಳು ಹಾಗೂ ಅವಕಾಶಗಳು, ಭದ್ರತೆಗಳು ಅವುಗಳ ಮೌಲ್ಯ ಮಾಪನಗಳು ಹಾಗೂ ಸಾಲಗಾರರು ಒದಗಿಸಿದ ಜಾಮೀನುದಾರರ ಆರ್ಥಿಕ ಸಾಮರ್ಥ್ಯಗಳನ್ನು ಪರಿಶೀಲಿಸಧಕ್ಕೆ ಹಾಗೂ ಸಾಲಗಳನ್ನು ಮಂಜೂರಿ ಮಾಡಿದ ನಂತರ ಮರುಪಾವತಿಗೆ ಅನುಕೂಲಕರವಾದ ಸೂಕ್ತ ಕರಾರುಗಳನ್ನು ಸರಿಯಾದ ರೀತಿಯಲ್ಲಿ ವಿದಿಸದ ಇದಕ್ಕೆ ಸಾಲಗಳು ಸುಸ್ಥಿಯಾಗಿ ನಂತರ ವಸೂಲಿಗೆ ಕಷ್ಟಕರವಾಗುವವು ಇಂತಹ ಕಾರಣಗಳಿಂದ ಸಾಲಗಳು ಸುಸ್ಥಿಯಾಗಿ ಮುಂದುವರೆದಲ್ಲಿ ಸಹಕಾರಿಗಳ ಅವೈಜ್ಞಾನಿಕ ಸಾಲ ಮಂಜೂರಿ ಪದ್ಧತಿಯೇ ಕಾರಣ. ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿದ್ದಲ್ಲಿ ಸಾಲಗಳ ಸುಸ್ಥಿಗಳ ಪ್ರಮಾಣ, ವಸೂಲಿಯಲ್ಲಿಯ ತೊಂದರೆಗಳು ಕಡಿಮೆಯಾಗಬಹುದು.
8. ಸಾಲಗಳ ಖಾತೆಗಳಲ್ಲಿಯ ವ್ಯವಹಾರಗಳು ಮೇಲಿಂದ ಮೇಲೆ ಸಹಕಾರಿಯ ಅಧಿಕಾರಿಗಳು ಸಮಯೋಚಿತವಾಗಿ ಪರಿಶೀಲಿಸಬೇಕು ಸಾಲ ಪಡೆದ ಉದ್ದೇಶಕ್ಕೆ ಸಾಲದ ವಿನಿಯೋಗ ಆಗುತ್ತಿರುವ ಬಗ್ಗೆ ತಿಳಿದುಕೊಳ್ಳಬೇಕು. ಸಾಲ ಖಾತೆಗಳಲ್ಲಿ ಸುಸ್ಥಿಗಳು ಪ್ರಾರಂಭವಾದಲ್ಲಿ ಅದರ ಕಾರಣಗಳನ್ನು ಅಭ್ಯಸಿಸಿ ಸೂಕ್ತ ಕ್ರಮಗಳನ್ನು ಸಾಲ ಖಾತೆಯನ್ನು ನಿಯಮಿತವಾಗಿ ಇರಿಸಲು ಹಾಗೂ ಮುಂದುಬರುವ ತೊಂದರೆಗಳನ್ನು ಹೋಗಲಾಡಿಸಲು ಸೂಕ್ತ ಕ್ರಮಗಳನ್ನು ಕೈಕೊಳ್ಳಬೇಕು. ಸುಸ್ಥಿಯಾದಲ್ಲಿ ವಸೂಲಿಯ ಕಾನೂನು ಕ್ರಮಗಳನ್ನು ಸರಿಯಾದ ವೇಳೆಯಲ್ಲಿ ಸರಿಯಾಗಿ ಜರುಗಿಸಬೇಕು. ಅದರಿಂದ ಸುಸ್ಥಿ ಬಾಕಿಗಳು ವಸೂಲಿ ಮಾಡಲು ಅನುಕೂಲವಾಗುತ್ತದೆ. ತಡವಾಗಿ ವಸೂಲಿ ಕ್ರಮ ಕೈಕೊಂಡಿದಕ್ಕೆ ಸಾಲ ಖಾತೆಯ ಮೇಲಿನ ಬಡ್ಡಿ ಬಾಕಿಗಳು ಬೆಳೆದು ಒಟ್ಟು ಬರತಕ್ಕ ಸಾಲ ಬಾಕಿಗಳು ಬೆಳೆದಿದ್ದರಿಂದ ಕೆಲವು ಸಾಲ ಬಾಕಿಗಳು ಪೂರ್ತಿ ವಸೂಲಾಗದೆ ಉಳಿದು ವಸೂಲಾಗದ ಸುಸ್ಥಿಬಾಕಿಗಳೆಂದು ಪರಿಗಣಿಸುವುದು ಅನಿವಾರ್ಯವಾಗಿರುತ್ತದೆ. ಇಂತಹ ಕ್ರಮಗಳಿಂದ ಜಾಮೀನುದಾರರು ತತ್ತರಿಸಬೇಕಾಗುವುದು. ಇಂತಹ ಪದ್ಧತಿಗಳು ಮುಂದುವರೆದಲ್ಲಿ ಸದಸ್ಯರ ಸಾಲಗಳಿಗೆ ಸದಸ್ಯರು ಜಾಮೀನಾಗಲು ಹಿಂದೇಟು ಹಾಕಬಹುದು. ■


## ವಾಹನ ಮಾರಾಟಕ್ಕಿದೆ

ಸುಸ್ಥಿತಿಯಲ್ಲಿರುವ ಸಂಯುಕ್ತ ಸಹಕಾರಿ ಕಚೇರಿಯ ವಾಹನ ಬಿಳಿ ಬಣ್ಣದ – 2010ರ ಮಾಡೆಲ್‌ನ ಟೊಯೋಟಾ ಇನೋವಾ ಕೆಎ–01 ಎಮ್.ಎಫ್. 4424ನ್ನು ಮಾರಾಟ ಮಾಡಲು ತಿರ್ಮಾನಿಸಿದೆ. ಪ್ರಸ್ತುತ ವಾಹನದ ಬುಕ್ ವ್ಯಾಲ್ಯು ರೂ.7,70,000/– ಇರುತ್ತದೆ. ಈ ಬೆಲೆಗಿಂತ ಹೆಚ್ಚಿನ ಮೊತ್ತಕ್ಕೆ ಖರೀದಿಸಲು ಇಚ್ಛಿಸುವವರು ದಿನಾಂಕ: 20.03.2014 ರೊಳಗಾಗಿ ಕಚೇರಿಯ ವೇಳೆಯಲ್ಲಿ (10.00 ರಿಂದ 05.30) ತಮ್ಮ ದರವನ್ನು ಲಿಖಿತವಾಗಿ ಸೂಚಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ಕಚೇರಿ ಅಥವಾ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರ ಇವರನ್ನು ಸಂಪರ್ಕಿಸಲು ಕೋರಿದೆ.

ದಿನಾಂಕ : 08.03.2014 — **ವ್ಯವಸ್ಥಾಪಕ ನಿರ್ದೇಶಕರು**
ಸ್ಥಳ : ಬೆಂಗಳೂರು. — ಕ.ರಾ.ಸೌ.ಸಂ.ಸಹಕಾರಿ ನಿ.



– ಬಿ.ವಿ.ರವೀಂದ್ರನಾಥ್



# ಸಹಕಾರಿಗಳಿಗೆ ಅನ್ವಯವಾಗುವಂತೆ ವಿವಿಧ ತೆರಿಗೆ ಕಾಯ್ದೆಗಳು – ವೃತ್ತಿ ತೆರಿಗೆ ಕಾಯ್ದೆ

- ಪ್ರಸಕ್ತ ಜಾರಿಯಲ್ಲಿರುವ ವೃತ್ತಿ ತೆರಿಗೆ ಕಾಯ್ದೆಯಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಣಿಗೊಂಡ ಸಹಕಾರಿ ಸಂಸ್ಥೆಯು ಯಾವುದೇ ವೃತ್ತಿ, ವ್ಯಾಪಾರ ಯಾ ಕಸುಬುಗಳನ್ನು ನಡೆಸುತ್ತಿದ್ದರೆ ವೃತ್ತಿ ತೆರಿಗೆ ಪಾವತಿಸ ಬೇಕಾಗುತ್ತದೆ.
- ಸಹಕಾರ ಸಂಸ್ಥೆಯು ಕೇವಲ ಪತ್ತಿನ ಚಟುವಟಿಕೆಗಳನ್ನು ನಡೆಸುತ್ತಿದ್ದು ತಾಲ್ಲೂಕಿಂತ ಕಡಿಮೆ ವ್ಯಾಪ್ತಿಯದ್ದಾಗಿದ್ದರೆ ಪ್ರಸಕ್ತ ಜಾರಿಯಲ್ಲಿರುವ ವೃತ್ತಿತೆರಿಗೆ ಕಾಯ್ದೆಯಡಿಯಲ್ಲಿ ವೃತ್ತಿ ತೆರಿಗೆ ಪಾವತಿಸಬೇಕಿರುವುದಿಲ್ಲ. ಬೇರೆ ಯಾವುದೇ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ. ಹಾಗೂ ಶಾಖೆಗಳನ್ನು ಹೊಂದಿದ್ದರೆ ಪ್ರತಿ ಶಾಖೆಗೂ ವೃತ್ತಿ ತೆರಿಗೆ ಪಾವತಿಸಬೇಕಿರುತ್ತದೆ.
- ಹಾಲಿ ಇರುವ ಕಾಯ್ದೆಯಂತೆ ಸಹಕಾರ ಸಂಸ್ಥೆಯು ವ್ಯಾಪ್ತಿಯ ಆಧಾರದಲ್ಲಿ ಈ ಕೆಳಕಂಡಂತೆ ವೃತ್ತಿ ತೆರಿಗೆ ಪಾವತಿಸಬೇಕಾಗಿರುತ್ತದೆ.
  - ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ — ಇಲ್ಲ
  - ತಾಲ್ಲೂಕು ವ್ಯಾಪ್ತಿ — ರೂ 1000–00
  - ಜಿಲ್ಲಾ ವ್ಯಾಪ್ತಿ — ರೂ 1500–00
  - ಜಿಲ್ಲಾವ್ಯಾಪ್ತಿ ಮೀರಿ (ರಾಜ್ಯವ್ಯಾಪ್ತಿ) — ರೂ 2500–00
- ಸಹಕಾರ ಸಂಸ್ಥೆಯು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (VAT) ಕಾಯ್ದೆ ಅಡಿಯಲ್ಲಿ ನೋಂದಣಿಯನ್ನು ಹೊಂದಿದ್ದಲ್ಲಿ ತನ್ನ ವಾರ್ಷಿಕ ವ್ಯಾಪಾರ ವಹಿವಾಟಿಗನುಗುಣವಾಗಿ ಈ ಕೆಳಕಂಡಂತೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ
  - ಎರಡು (ಐದು) ಲಕ್ಷರೂವರೆಗೆ — ಇಲ್ಲ
  - ಹತ್ತು ಲಕ್ಷರೂವರೆಗೆ — ರೂ 1000–00
  - ಇಪ್ಪತ್ತೈದು ಲಕ್ಷದವರೆಗೆ — ರೂ 1500–00
  - ಇಪ್ಪತ್ತೈದು ಲಕ್ಷದ ಮೇಲ್ಪಟ್ಟು — ರೂ 2500–00
- ಸಹಕಾರ ಸಂಸ್ಥೆಯು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮದಡಿಯಲ್ಲಿ ನೋಂದಣಿಯನ್ನು ಹೊಂದಿದ್ದಲ್ಲಿ ತನ್ನ ಸಿಬ್ಬಂದಿಗಳ ಸಂಖ್ಯೆಗನುಗುಣವಾಗಿ ಕೆಳಕಂಡಂತೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ.
  - ಸಿಬ್ಬಂದಿಗಳಿಲ್ಲದಿದ್ದರೆ — ಇಲ್ಲ
  - ಐದು ಮಂದಿ ಸಿಬ್ಬಂದಿಗಳವರೆಗೆ — ರೂ. 1000–00
  - ಹತ್ತು ಮಂದಿ ಸಿಬ್ಬಂದಿಗಳವರೆಗೆ — ರೂ. 1500–00
  - ಹತ್ತು ಮಂದಿ ಸಿಬ್ಬಂದಿಗಳಿಗೆ ಮೇಲ್ಪಟ್ಟು — ರೂ. 2500–00
- ಅಂತಹ ಸಹಕಾರ ಸಂಸ್ಥೆಗಳು ನಮೂನೆ 1ರಲ್ಲಿ ಅರ್ಜಿಸಲ್ಲಿಸಿ ನೋಂದಣಿಯನ್ನು ಪಡೆಯತಕ್ಕದ್ದು ಮತ್ತು ವಾರ್ಷಿಕವಾಗಿ ನಿಯಮಿತವಾಗಿ ವೃತ್ತಿತೆರಿಗೆಯನ್ನು ಪಾವತಿಸತಕ್ಕದ್ದು.
- ಶಾಖೆಗಳನ್ನು ಹೊಂದಿದ್ದರೆ ಪ್ರತಿ ಶಾಖೆಗೂ ಪ್ರತ್ಯೇಕವಾಗಿ ವೃತ್ತಿತೆರಿಗೆಯನ್ನು ಪಾವತಿಸ ಬೇಕಿರುತ್ತದೆ.
- ಇದಲ್ಲದೆ ಸಹಕಾರ ಸಂಸ್ಥೆಯ ಯಾವುದೇ ನೌಕರರ ಮಾಸಿಕ ಒಟ್ಟು ಸಂಬಳವು ಕೆಳಕಂಡ ಮಿತಿಗಳಿಗೆ ಮೀರಿದಲ್ಲಿ ಅಂತಹವರಿಗೆ ವೃತ್ತಿ ತೆರಿಗೆ ಬಾಧ್ಯತೆ ಇರುತ್ತದೆ. ತೆರಿಗೆಯನ್ನು ವೇತನದಾತರು ವೇತನದಾರರ ಸಂಬಳದಿಂದ ಕಡಿತಮಾಡಿ ಸರಕಾರಕ್ಕೆ ಪಾವತಿಸಬೇಕಾಗಿರುತ್ತದೆ.
  - $>$ 10,000 $<$ 15,000 — ರೂ 150–00 ಪ್ರತಿ ಮಾಸಿಕ
  - $>$ 15,000 — ರೂ 200–00 ಪ್ರತಿ ಮಾಸಿಕ
- ಅಂತಹ ಸಹಕಾರ ಸಂಸ್ಥೆಗಳು ನಮೂನೆ 2ರಲ್ಲಿ ಅರ್ಜಿ ಸಲ್ಲಿಸಿ ದಾಖಲಾತಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
- ನಿಯಮಿತವಾಗಿ ವೃತ್ತಿತೆರಿಗೆಯನ್ನು ಆಯಾ ನೌಕರರ ವೇತನದಲ್ಲಿ ಕಡಿತಗೊಳಿಸಿ ಸರ್ಕಾರಕ್ಕೆ ಪಾವತಿಸತಕ್ಕದ್ದು.
- ನಿಯಮಿತವಾಗಿ ವೃತ್ತಿತೆರಿಗೆ ಇಲಾಖೆಗೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.
- ವರ್ಷಕ್ಕೊಮ್ಮೆ ಇಲಾಖೆಯ ಅಧಿಕಾರಿಗಳಿಂದ ಕರ ನಿರ್ಧರಣೆಯನ್ನು ಮಾಡಿಸಬೇಕಾಗಿರುತ್ತದೆ.

# ಸಮಗ್ರ ಹಣಕಾಸು ಕ್ಷೇತ್ರದ ಮಾಹಿತಿಗೆ ಒಂದು ವೆಬ್‌ತಾಣ

**http://www.banknetindia.com/**

ರಘುನಂದನ ಕೆ.
ಕ.ರಾ.ಸ.ಸಂ.ಸ.ನಿ., ಬೆಂಗಳೂರು.

http://www.banknetindia.com/

ಅಂತರ್ಜಾಲ ಮಾಧ್ಯಮದ ಅನ್ವಯತೆ ಇರುವುದೇ ಜ್ಞಾನ ಸಂಗ್ರಹ ಹಾಗೂ ಜ್ಞಾನ ಪ್ರಸಾರಕ್ಕಾಗಿ. ಗೂಗಲ್, ಯಾಹೂ ಅಂತಹ ಮುಖ್ಯ ಸರ್ಚ್ ಇಂಜಿನ್‌ಗಳ ಶೋಧನೆಗೆ ನಿಲುಕುವ ಮಾಹಿತಿಗಳ 500 ಪಟ್ಟಿನಷ್ಟು ಹೆಚ್ಚಿನ ಮಾಹಿತಿಗಳು ಅಂತರ್ಜಾಲದಲ್ಲಿವೆ ಎಂದು ಅಂದಾಜಿಸಲಾಗಿದೆ. ಪ್ರತಿದಿನ ನೋಡಲ್ಪಡುತ್ತಿರುವ, ಬಳಕೆಯಾಗುತ್ತಿರುವ ಮಾಹಿತಿಗಳ ಪ್ರಮಾಣವೂ ಅಗಾಧ. ಇಂದಿನ ಪೀಳಿಗೆ, ಮಾಹಿತಿ ಸಂಗ್ರಹ ಹಾಗೂ ಹಂಚಿಕೆಗಾಗಿ ಅಂತರ್ಜಾಲವನ್ನೇ ಅವಲಂಬಿಸುತ್ತಿದೆ. ಅಗಾಧ ಮಾಹಿತಿ ರಾಶಿಯಲ್ಲಿ ನಮಗೆ ಬೇಕಾಗಿರುವುದೆಷ್ಟು, ಅನವಶ್ಯಕವೆನಿಸುವೆಷ್ಟು ಎನ್ನುವುದನ್ನು ಅರಿಯುವ ಅಗತ್ಯವೂ ಹೆಚ್ಚಾಗಿದೆ. ನಿರ್ದಿಷ್ಟ ವಿಷಯಗಳ ಬಗ್ಗೆ ಅತ್ಯುಪಯುಕ್ತ ಮಾಹಿತಿಗಳನ್ನ ಕಡಿಮೆ ಸಮಯದಲ್ಲಿ ಪಡೆಯುವ ಉದ್ದೇಶದಿಂದ, ಸಂಬಂಧಪಟ್ಟ ವಿಷಯಗಳ ಪ್ರಮುಖ ವೆಬ್‌ತಾಣಗಳ ಮಾಹಿತಿಯನ್ನು ಹೊಂದುವುದು ಅವಶ್ಯಕವಾಗುತ್ತದೆ.

ಜಾಗತಿಕ ಹಣಕಾಸು ರಂಗದ ಸ್ಥಿತಿ ಗತಿಗಳ ಮಾಹಿತಿ ಒದಗಿಸುವ ತಾಣವನ್ನು ರೂಪಿಸಲು ಬ್ಯಾಂಕ್‌ನೆಟ್ ಗ್ರೂಫ್ ಪ್ರಯತ್ನಿಸಿದೆ. ಇದರ ಸಲಹಾ ಸಮಿತಿಯಲ್ಲಿ 16 ದೇಶಗಳ ಸದಸ್ಯರಿದ್ದಾರೆ. ಇವರು ಮಧ್ಯಪ್ರಾಚ್ಯ, ಏಷ್ಯಾ ಫೆಸಿಪಿಕ್, ಯೂರೋಪ್ ಹಾಗೂ ಯುಎಸ್‌ಎನಲ್ಲಿ ಕೆಲಸ ಮಾಡಿದ್ದಾರೆ. ಹಣಕಾಸು ಕ್ಷೇತ್ರದ ವಿಸ್ತಾರದಲ್ಲಿ ಬ್ಯಾಂಕಿಂಗ್ ಕ್ಷೇತ್ರ ಮಾತ್ರವಲ್ಲದೆ, ವಿದೇಶೀ ವಿನಿಮಯ, ವಿಮಾ ಕ್ಷೇತ್ರ, ಷೇರು ಮಾರುಕಟ್ಟೆ, ಹೊರಗುತ್ತಿಗೆ ಕ್ಷೇತ್ರದ ವಿದ್ಯಮಾನಗಳು, ಹಣಕಾಸು ವಿಷಯಗಳು ಮುಂತಾದವುಗಳು ಒಳಗೊಳ್ಳುತ್ತವೆ. ಈ ಎಲ್ಲ ಕ್ಷೇತ್ರಗಳ ವಿದ್ಯಮಾನಗಳು ಬ್ಯಾಂಕಿಂಗ್ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಪ್ರಭಾವಿಸುತ್ತವೆ. ಇವೆಲ್ಲವನ್ನು ಪರಿಗಣಿಸಿ ಭಾರತದ ಹಣಕಾಸು ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಉಪಯುಕ್ತವಾಗುವಂತೆ ಭಾರತದಲ್ಲಿ 'ಬ್ಯಾಂಕ್‌ನೆಟ್ ಇಂಡಿಯಾ' ವೆಬ್‌ತಾಣ ಕಾರ್ಯನಿರ್ವಹಿಸುತ್ತಿದೆ.

ವೆಬ್‌ತಾಣ 19 : http://www.banknetindia.com/

- ಈ ವೆಬ್‌ತಾಣದಲ್ಲಿ ಪ್ರಮುಖವಾಗಿ ಬ್ಯಾಂಕಿಂಗ್, ವಿದೇಶಿ ವಿನಿಮಯ, ಮಾಹಿತಿ ತಂತ್ರಜ್ಞಾನ, ಹಣಕಾಸು, ವಿಮಾ ಕ್ಷೇತ್ರ, ವ್ಯಾವಹಾರಿಕ ಹೊರಗುತ್ತಿಗೆ ಕ್ಷೇತ್ರ (ಬಿಪಿಒ), ಆರ್‌ಬಿಐ ಹಾಗೂ ಷೇರು ಮಾರುಕಟ್ಟೆ (ಸೆಬಿ)ಯ ವಿಸ್ತೃತವಾದ ಮಾಹಿತಿಯನ್ನು ಪಡೆಯಬಹುದು. ಪ್ರತೀ ವಿಷಯಕ್ಕೂ ವಿಸ್ತೃತವಾದ ವೆಬ್ ಪುಟಗಳನ್ನು ರಚಿಸುವ ಮೂಲಕ ಮಾಹಿತಿಯನ್ನು ಒದಗಿಸಲಾಗಿದೆ.
- ಪ್ರಮುಖವಾಗಿ ಗಮನಹರಿಸಬೇಕಾದ ದರಗಳು ಅಂದರೆ, ಜಾಗತಿಕ ಷೇರು ಮಾರುಕಟ್ಟೆಯ ದರ, ವಿದೇಶಿ ವಿನಿಮಯದ ದರ, ಅಂತಾರಾಷ್ಟ್ರೀಯ ಸಾಲ ಪ್ರಮಾಣ, ಬಿಎಸ್‌ಇ ಹಾಗೂ ಎನ್‌ಎಸ್‌ಇಗಳ ಷೇರು ದರಗಳ ನೇರ ನೋಟ ಮುಂತಾದ ದಿನ ನಿತ್ಯದ ದರಗಳನ್ನು ಈ ತಾಣದಲ್ಲಿ ಪಡೆಯಬಹುದು.
- ವಿವಿಧ ಕರೆನ್ಸಿ ದರಗಳನ್ನು ನೋಡಲು ಅನುಕೂಲವಾಗುವಂತೆ ಕರೆನ್ಸಿ ಕನ್ವರ್ಟರ್, 2009 ರಿಂದ 2011ರವರೆಗಿನ ಉಚಿತ ಸುದ್ದಿಪತ್ರಗಳು, ಸಾಮಾಜಿಕ ಜಾಲತಾಣಗಳಲ್ಲಿ ಬ್ಯಾಂಕ್‌ನೆಟ್ ಚಟುವಟಿಕೆ, ಜಾಹಿರಾತು



ಅವಕಾಶ ಮುಂತಾದ ಮಾಹಿತಿಗಳನ್ನು ಇಲ್ಲಿ ಪಡೆಯಬಹುದು.

- ಬ್ಯಾಂಕುಗಳ ಮಾಹಿತಿ ಒದಗಿಸುವ ಡೈರಕ್ಟರಿ, ವಿಮಾಕ್ಷೇತ್ರದ ಸಂಸ್ಥೆಗಳ ಮಾಹಿತಿ ಒದಗಿಸುವ ಮಾರ್ಗದರ್ಶಿ, ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಮಾಹಿತಿ ಕೋಶ, ವ್ಯಾವಹಾರಿಕ ಮಾರ್ಗದರ್ಶಿಯನ್ನು, ವಿವಿಧ ಸಮ್ಮೇಳನ, ಗೋಷ್ಠಿಗಳ ಮಾಹಿತಿಯನ್ನು ಈ ತಾಣದಿಂದ ಪಡೆಯಬಹುದು.
- ಹಣಕಾಸು ಕ್ಷೇತ್ರಕ್ಕೆ ಸಂಬಂಧಿಸಿದ ಕಿರುಚಿತ್ರಗಳು, ವಿಡಿಯೋಗಳನ್ನು, ವಿಶೇಷ ವರದಿಗಳನ್ನು, ಸಾಧನೆಗಳ ಮಾಹಿತಿಯನ್ನು ಈ ತಾಣದಲ್ಲಿ ಒದಗಿಸಲಾಗಿದೆ.
- ಈ ವೆಬ್‌ತಾಣದಲ್ಲಿ ಬ್ಯಾಂಕ್‌ನೆಟ್ ಗ್ರೂಫ್ ಇದರ ಪರಿಚಯ, ಬ್ಯಾಂಕ್‌ನೆಟ್ ಇಂಡಿಯಾ ವೆಬ್‌ತಾಣ ರೂಪಗೊಂಡ ಬಗ್ಗೆ, ಇದರ ಕಾರ್ಯಚಟುವಟಿಕೆಗಳ ಮಾಹಿತಿಯನ್ನು, ಬ್ಯಾಂಕ್‌ನೆಟ್ ಫೌಂಡೇಶನ್, ಪಬ್ಲಿಕೇಷನ್, ಕಾನ್ಫರೆನ್ಸ್ ಹಾಗೂ ಬ್ಯಾಂಕ್‌ನೆಟ್ ಕ್ಲಬ್ ಇವುಗಳ ಮಾಹಿತಿಯನ್ನು ನೋಡಬಹುದು.
- ಬ್ಯಾಂಕ್‌ನೆಟ್ ಗ್ರೂಫ್‌ನ ಸಹಯೋಗ ಮತ್ತು ಕಾರ್ಯತಂತ್ರದ ಮೈತ್ರಿಯ ನಿಯಮಗಳು, ಇದರ ಸ್ಥಾಪಕ ಹಾಗೂ ವ್ಯವಸ್ಥಾಪಕರ ಬಗೆಗಿನ ಮಾಹಿತಿ, ಇದರ ಸಹೋದ್ಯಮವಾದ ಸಿಕ್ಸ್ ಸಿಗ್ಮಾ ಎನ್ನುವ ಚಿತ್ರ ನಿರ್ಮಾಣ ಸಂಸ್ಥೆಯ ಮಾಹಿತಿ, ಪತ್ರಿಕಾ ಪ್ರಚಾರದ ವಿಷಯಗಳನ್ನು ಈ ತಾಣದಲ್ಲಿ ನೋಡಬಹುದು.

ಬ್ಯಾಂಕ್‌ನೆಟ್ ಇಂಡಿಯಾ ವೆಬ್‌ತಾಣವು ವಿಷಯ ಹಾಗೂ ವಾಣಿಜ್ಯಾತ್ಮಕ ಉಪಯುಕ್ತತೆಯಲ್ಲಿ ವಿಶ್ವದ ಅಗ್ರ ವೆಬ್‌ತಾಣಗಳ ಸ್ಥಾನದಲ್ಲಿದೆ. ಅಲ್ಲದೆ, ವಿಶ್ವದ ಅಗ್ರ 25 ಬ್ಯಾಂಕಿಂಗ್ ವೆಬ್‌ತಾಣಗಳಲ್ಲಿ ಹಾಗೂ ವಿಶ್ವದ ಅಗ್ರ 20 ಬ್ಯಾಂಕಿಂಗ್ ತಂತ್ರಜ್ಞಾನ ಮತ್ತು ಸಂಪನ್ಮೂಲಗಳ ವೆಬ್‌ತಾಣದ ಪಟ್ಟಿಯಲ್ಲೂ ಗುರುತಿಸಿಕೊಂಡಿದೆ. ಈ ತಾಣವು 1,50,000 ವೃತ್ತಿಪರರನ್ನು ಸದಸ್ಯರನ್ನಾಗಿಯೂ, 150 ದೇಶಗಳ 2500ಕ್ಕೂ ಹೆಚ್ಚಿನ ಸಂಸ್ಥೆಗಳನ್ನು ಚಂದಾದಾರರನ್ನಾಗಿಯೂ ಹೊಂದಿದೆ. ಬ್ಯಾಂಕಿಂಗ್, ಹಣಕಾಸು, ವಿಮಾ, ಹೊರಗುತ್ತಿಗೆ, ತಂತ್ರಜ್ಞಾನ ಕ್ಷೇತ್ರಕ್ಕೆ ಸೇರಿದ 25,000ಕ್ಕೂ ಹೆಚ್ಚು ಪುಟಗಳ ಮಾಹಿತಿಯನ್ನ ಈ ವೆಬ್‌ತಾಣ ಒದಗಿಸುತ್ತದೆ. ■

ಲೇಖನ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

## FORM IV (SEE RULE-8)

| | | | |
|---|---|---|---|
| 1. | Place of Publication | : | Bangalore |
| 2. | Periodicity of its Publications | : | Monthly |
| 3. | Printer's Name | : | Varna Communication |
| | Whether Citizen of India | : | Yes |
| | If foreigner, State the country of origin | | |
| | Address | : | 48/4, Rangarao road, Shankarpuram, Bangalore - 4 |
| 4. | Editor's Name | : | Sharangouda G. Patil |
| | Whether Citizen of India | : | Yes |
| | If foreigner, State the country of origin | | |
| | Address | : | Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |
| 5. | Name and Address of individuals who own the Newspaper and partners or share holders holding more than percent of the total capital | : | Managing Director Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |

I, Sharangouda G. Patil here by declare that the particulars given above are true to the best of my knowledge and belief.

Date : 28-02-2014
Place : Bangalore

Sd/-
Signature of the Publisher / Editor

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

ದೂ.ಸಂ : 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ. ಕಾರಕೂನ**

ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

## ಕೌಟುಂಬಿಕ ಸಾಮಾಜಿಕ, ಸಾಂಸ್ಕೃತಿಕ ತಳಹದಿಯಿಂದಾಗಿ ಭಾರತೀಯ ಅರ್ಥ ವ್ಯವಸ್ಥೆ ಭದ್ರ

**(ಖ್ಯಾತ ವಿಚಾರವಾದಿ, ಆರ್ಥಿಕ ತಜ್ಞ, ಬರಹಗಾರ ಶ್ರೀ ಎಸ್. ಗುರುಮೂರ್ತಿಯವರ ಉಪನ್ಯಾಸಗಳಿಂದ ಆಯ್ದ ಭಾಗ)**

ಭಾರತೀಯ ಅರ್ಥ ವ್ಯವಸ್ಥೆಗೆ ಭಾರತೀಯ ಕೌಟುಂಬಿಕ, ಸಮುದಾಯ ಜೀವನ ವ್ಯವಸ್ಥೆ ಹಾಗೂ ಸಾಮಾಜಿಕ ಬದ್ಧತೆಯ ವ್ಯವಸ್ಥೆ ತಳಹದಿಯಾಗಿದೆ. 2008ರಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉಂಟಾದ ಆರ್ಥಿಕ ಹಿನ್ನಡೆಗೆ ಆ ದೇಶದ ಅರ್ಥಶಾಸ್ತ್ರಜ್ಞರು ಹಾಗೂ ಆಡಳಿತಗಾರರು ಬದಲಿ ಪರ್ಯಾಯ ಅರ್ಥವ್ಯವಸ್ಥೆಯ ಹುಡುಕಾಟ ಪ್ರಾರಂಭಿಸಿದಾಗ ಭಾರತೀಯ ಅರ್ಥವ್ಯವಸ್ಥೆಯ ಮಾದರಿಯೇ ಪರ್ಯಾಯ ವ್ಯವಸ್ಥೆಯೆಂದು ಮನಗಾಣಲಾಗಿದೆ.

17ನೇ ಶತಮಾನಕ್ಕಿಂತ ಮೊದಲು ಅಂದರೆ ವಸಾಹತು ಶಾಹಿಗಳು ನಮ್ಮ ದೇಶಕ್ಕೆ ಬರುವುದಕ್ಕೆ ಮೊದಲಿನಿಂದಲೂ ನಮ್ಮ ದೇಶದ ಅರ್ಥ ವ್ಯವಸ್ಥೆ ಚೆನ್ನಾಗಿಯೆ ಬೆಳೆದು ಬಂದಿದೆ ಆರ್ಥಿಕ ಅಭಿವೃದ್ಧಿಯ ಪಥ ನಮಗೆ ಹೊಸದೇನಲ್ಲ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ತಳಹದಿಯ ಹಿನ್ನೆಲೆಯೇ ಭಾರತೀಯ ಅರ್ಥ ವ್ಯವಸ್ಥೆ ಮಾದರಿಯಾಗಿದೆ. ಬೇರೆ ದೇಶಗಳ ಮಾದರಿಯ ಅನುಕರಣೆಯ ಅಗತ್ಯವಿಲ್ಲ. ಕುಟುಂಬ ಜೀವನ, ಸಾಂಸ್ಕೃತಿಕ ಮತ್ತು ಸಾಮಾಜಿಕ ಬದ್ಧತೆಗಳು ದೇಶದ ಅರ್ಥವ್ಯವಸ್ಥೆಗೆ ಪೂರಕವಾಗಿವೆ. ಕುಟುಂಬಗಳಲ್ಲಿ ವಿಶೇಷವಾಗಿ ಮಹಿಳೆಯರು ಮಾಡುವ ಸಣ್ಣ ಉಳಿತಾಯಗಳು ದೇಶದ ಅರ್ಥವ್ಯವಸ್ಥೆಯನ್ನು ಭದ್ರಪಡಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಈ ದೇಶದ ಮಹಿಳೆಯರ ಉಳಿತಾಯ ಮನೋಭಾವ ಮೆಚ್ಚುವಂತಹದ್ದು.

ಪಾಶ್ಚಾತ್ಯ ದೇಶಗಳಲ್ಲಿ ಕುಟುಂಬ ಜೀವನಕ್ಕೆ ಪ್ರಾಧಾನ್ಯತೆ ಹಾಗೂ ಆಂತರಿಕ ಭದ್ರತೆಯ ಕೊರತೆಯು ಎದ್ದುಕಾಣುತ್ತಿದೆ. ಇದರಿಂದಾಗಿ ಸಮಗ್ರ ಹಾಗೂ ಸಮುದಾಯ ಅಭಿವೃದ್ಧಿಯ ಕನಸು ಕಾಣುವುದು ಬಹಳ ವಿರಳವಾಗಿದೆ. ವ್ಯಯಕ್ತಿಕ ಬೆಳವಣಿಗೆಯ ಚಿಂತನೆಗೆ ಹಾಗೂ ರಾಜ್ಯದ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡಲಾಗಿದೆ. ಭಾರತೀಯ ಅರ್ಥ ವ್ಯವಸ್ಥೆ ವಿದೇಶಗಳಲ್ಲಿರುವಂತೆ ವಿದೇಶಿ ಬಂಡವಾಳದ ಮೇಲೆ ವಿದೇಶಿ ನಿರ್ಯಾತದ ಮೇಲೆ ಯಾವ ಕಾಲದಲ್ಲೂ ಅವಲಂಬಿಸಿಲ್ಲ. ಆಂತರಿಕ ಬಂಡವಾಳದ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಬಂಡವಾಳದ ವಿನಿಯೋಗವೂ ಸಾಂಪ್ರದಾಯಿಕ. ಭದ್ರತೆಗೆ ಆದ್ಯತೆ. ಹೀಗಾಗಿ ಜನರಲ್ಲಿ ಬ್ಯಾಂಕಿಂಗ ವ್ಯವಸ್ಥೆ ತಾನೇ ತಾನಾಗಿ ಬೆಳೆದು ಹಣಕಾಸಿನ ಸ್ಥಿತಿಗತಿಯೂ ಭದ್ರವಾಗಿ ಬೆಳೆದು ಬಂದಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ವಿಪರೀತ ಏರುಪೇರುಗಳಿಗೆ ಅವಕಾಶವಾಗದಂತೆ ಸ್ಥಿರತೆಯನ್ನು ಕಾಯ್ದುಕೊಳ್ಳುವ ವ್ಯವಸ್ಥೆಯಿರುತ್ತದೆ.

ನಮ್ಮ ದೇಶದ ಅರ್ಥ ವ್ಯವಸ್ಥೆಗೆ ಭದ್ರ ತಳಹದಿಯಿರುವುದರಿಂದ ಉಳಿತಾಯ ಹಾಗೂ ಮಿತವ್ಯಯ ನಮ್ಮ ದೇಶದ ಜನರ ಜೀವನಾಡಿಯಾಗಿರುವುದರಿಂದ ವಿಶ್ವಕ್ಕೆ ಇದು ಮಾದರಿ ಅರ್ಥವ್ಯವಸ್ಥೆಯೆನಿಸಿದೆ.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551.
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010